# 69

# ಪುನರುತ್ಥಾನ

# (28:1-15)

ಯೇಸುವನ್ನು ಶಿಲುಬೆಗೆ ಹಾಕಿದ್ದು ಮತ್ತಾಯನ ಸುವಾರ್ತೆಯಲ್ಲಿ ಬರುವ ಕಥೆಯ ಪರಾಕಾಷ್ಟತೆಯಾಗಿದೆ. ಆತನು ಖಂಡಿತವಾಗಿಯೂ ಮರಣದ ಮೇಲೆ ಜಯವನ್ನು ಹೊಂದಿದನು ಎಂಬುದನ್ನು ತೋರಿಸುತ್ತದೆ (28:1-7)! ಪುನರುತ್ಥಾನ ಹೊಂದಿದ ಕರ್ತನನ್ನು ಸಂಧಿಸಿದ ಆ ಸ್ತ್ರೀಯರು ಆತನ ಮುಂದೆ ಗೌರವದಿಂದ ನಮಸ್ಕರಿಸಿ ಆರಾಧಿಸಿದರು. ಆತನು ಅವರಿಗೆ ತಾನು ಶಿಷ್ಯರನ್ನು ಗಲಿಲಾಯದಲ್ಲಿ ಬೇಟಿಯಾಗುವನೆಂದು ಅವರಿಗೆ ತಿಳಿಸಲು ಹೇಳಿದನು (28:8-10). ಅದೇ ಸಮಯದಲ್ಲಿ, ಖಾಲಿಯಾದ ಸಮಾಧಿಯ ಸತ್ಯವನ್ನು ಹತ್ತಿಕಲು ರೋಮನ್ ಕಾವಲುಗಾರರಿಗೆ ಯೆಹೂದ್ಯ ನಾಯಕರು ಲಂಚವನ್ನು ನೀಡಿದರು (28:11-15). ಈ ಸುವಾರ್ತೆಯ ವಿಶಯವು ಕ್ರಿಸ್ತನು ತನ್ನ ಶಿಷ್ಯರನ್ನು ಅಧಿಕೃತವಾಗಿ ಗಲಿಲಾಯದಲ್ಲಿ ಬೇಟಿಯಾದ ಸಂಗತಿಯನ್ನು ಮತ್ತು ಅವರಿಗೆ ಮಹತ್ತರ ನಿಯೋಗವನ್ನು - ಅರಸನ ಆತ್ಮೀಕ ರಾಜ್ಯಕ್ಕಾಗಿ ಕ್ರಮವಾಗಿ ಮುನ್ನಡೆಯುವ ಆಜ್ಞೆಯನ್ನು ನೀಡುವದರೊಂದಿಗೆ ಮುಕ್ತಾಯವಾಗುತ್ತದೆ (28:16-20).

## ಖಾಲಿಯಾದ ಸಮಾಧಿ (28:1-7)

**1ಸಬ್ಬತ್‌ದಿನ ಆದ ಮೇಲೆ ವಾರದ ಮೊದಲನೆಯ ದಿವಸ ಬೆಳಗಾಗುವಾಗ ಮಗ್ದಲದ ಮರಿಯಳೂ ಆ ಬೇರೆ ಮರಿಯಳೂ ಸಮಾಧಿಯನ್ನು ನೋಡುವದಕ್ಕೆ ಬಂದರು. 2ಆಗ ಮಹಾ ಭೂಕಂಪವಾಯಿತು. ಕರ್ತನ ದೂತನು ಆಕಾಶದಿಂದ ಇಳಿದು ಬಂದು ಆ ಕಲ್ಲನ್ನು ಬಾಗಲಿನಿಂದ ಉರುಳಿಸಿ ಅದರ ಮೇಲೆ ಕೂತುಕೊಂಡನು. 3ಅವನ ಮುಖಭಾವವು ಮಿಂಚಿನಂತೆ ಇತ್ತು, 4ಅವನ ಉಡುಪು ಹಿಮದಂತೆ ಬೆಳ್ಳಗಿತ್ತು; ಕಾವಲುಗಾರರು ಅವನಿಗೆ ಹೆದರಿ ನಡುಗಿ ಸತ್ತವರ ಹಾಗಾದರು. 5ಆಗ ದೂತನು ಆ ಹೆಂಗಸರಿಗೆ - ನೀವು ಹೆದರಬೇಡಿರಿ; ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು; ಆತನು ಇಲ್ಲಿ ಇಲ್ಲ; 6ತಾನು ಹೇಳಿದಂತೆ ಎದ್ದಿದ್ದಾನೆ; ಬನ್ನಿ, ಆತನು ಮಲಗಿದ್ದ ಸ್ಥಳವನ್ನು ನೋಡಿರಿ; 7ಮತ್ತು ಬೇಗ ಹೋಗಿ ಆತನ ಶಿಷ್ಯರಿಗೆ - ಸತ್ತವನು ಬದುಕಿದ್ದಾನೆ, ಆತನು ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ, ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ; ನಾನು ನಿಮಗೆ ಹೇಳಿದ್ದೇನೆ, ನೋಡಿರಿ ಎಂದು ಹೇಳಿದನು.**

**ವಚನ 1.** ಕಾಲಾನುಕ್ರಮವಾದ ಟಿಪ್ಪಣಿಯನ್ನು ಒಳಗೊಂಡಿದೆ. ಸ್ತ್ರೀಯರು ಯಾವಾಗ ಯೇಸುವಿನ ಸಮಾಧಿಯ ಬಳಿಗೆ ಹೋಗಲು ಸಿದ್ಧರಾದರು ಎಂಬ ವಿವರಣೆಯೊಂದಿಗೆ: **ಸಬ್ಬತ್‌ದಿನ ಆದ ಮೇಲೆ ವಾರದ ಮೊದಲನೆಯ ದಿವಸ ಬೆಳಗಾಗುವಾಗ** ಎಲ್ಲಕ್ಕಿಂತಲೂ ಹೆಚ್ಚಾಗಿ ಉಲ್ಲೇಖವು ಯೇಸು ಸತ್ತವರೊಳಗಿಂದ ಎದ್ದು ಬಂದ ಸಮಯವನ್ನು ಗುರುತಿಸುವದಕ್ಕಾಗಿ ನೀಡಲಾಗಿದೆ. NEB ಹೇಳುತ್ತದೆ, "ಸಬ್ಬತ್ತು ಮುಗಿದುಹೋಗಿತ್ತು, ಮತ್ತು ಭಾನುವಾರ ಬೆಳಗಾಗುವ ಸಮಯವಾಗಿತ್ತು."

ಹಿಂದಿನ ಕಾಲದಲ್ಲಿ, ಈ ಉಲ್ಲೇಖವು ಭಾನುವಾರ ಬೆಳಗಿನ ಜಾವದ ಬದಲಾಗಿ

ಶನಿವಾರ ಸಂಜೆಯನ್ನು ಸೂಚಿಸುತ್ತದೆ ಎಂದು ವಾದಿಸಲಾಗಿತ್ತು. "ನಂತರ" (*opse*) ಎಂಬ ಪದಕ್ಕೆ ಗ್ರೀಕ್ ಪದವನ್ನು ಕೆಲವೊಮ್ಮೆ ಕ್ರಿಯಾವಿಶೇಷವಾಗಿ ಉಪಯೋಗಿಸಲಾಗುತ್ತದೆ; ಈ ಸಂಗತಿಗಳಲ್ಲಿ ಅದು "ತಡವಾಗಿ" ಅಥವಾ "ಸಾಯಂಕಾಲ ತಡವಾಗಿ" ಎಂದು ಅರ್ಥವನ್ನು ನೀಡಬಹುದು. ಆದಾಗ್ಯೂ ಇಲ್ಲಿ ಈ ಪದವನ್ನು ಉಪಸರ್ಗಾವ್ಯಯವಾಗಿ ಉಪಯೋಗಿಸಲಾಗಿದೆ ಅದರ ಅರ್ಥ "ನಂತರ"[1] ಇದರೊಟ್ಟಿಗೆ ಕ್ರಿಯಾಪದವನ್ನು "ಬೆಳಗಾಗಲು ಪ್ರಾರಂಭವಾದಾಗ" (*from epiphōskō*) ಇದನ್ನು "ಸಮೀಪಿಸು" ಎಂದು ಭಾಷಾಂತರಿಸಬಹುದು ಆದರೆ "ಪ್ರಕಾಶಿಸು" ಅಥವಾ "ಬೆಳಗಾಗು" ಎಂಬ ಅರ್ಥ. ಈ ಸನ್ನಿವೇಶದಲ್ಲಿ ಉತ್ತಮವಾಗಿ ಹೊಂದಿಕೆಯಾಗುತ್ತದೆ.[2] (*Sabbatōn*) ಎಂಬ ಬಹುವಚನ ಎರಡು ಸಾರಿ ವಚನ 1ರಲ್ಲಿ ಕಂಡುಬರುತ್ತದೆ. ಮೊದಲು ಅದು "ಸಬ್ಬತ್ತನ್ನು" (ನಮ್ಮ ಶನಿವಾರ ಸಂಜೆಯನ್ನು) ಉಲ್ಲೇಖಿಸುತ್ತದೆ ನಂತರ "ವಾರವನ್ನು" (ಏಳು ದಿನಗಳನ್ನು ಸೂಚಿಸುತ್ತದೆ)[3] ವಾಕ್ಯಭಾಗದಲ್ಲಿ "ವಾರದ ಮೊದಲನೆಯ ದಿನ" ಎಂದು ಗುರುತಿಸುತ್ತದೆ.[4]

ಸ್ತ್ರೀಯರು ಸಬ್ಬತ್ ದಿನದಲ್ಲಿ ಸಮಾಧಿಗೆ ಬರಲಿಲ್ಲ. ಯಾಕಂದರೆ ಅದು ವಿಶ್ರಾಂತಿಯ ದಿನವಾಗಿತ್ತು (ಲೂಕ 23:56). ಅವರು ಸಬ್ಬತ್ ಮುಗಿಸಿದ ನಂತರ ಬರಲಿಲ್ಲ (ಶನಿವಾರ ಸಂಜೆಯಲ್ಲಿ), ಯಾಕಂದರೆ ಆಗ ಕತ್ತಲಾಗುತ್ತಾ ಬಂದಿತ್ತು. ಬದಲಾಗಿ, ಅವರು ಭಾನುವಾರ ಬೆಳಗಿನ ಜಾವದಲ್ಲಿ ಬಂದರು. ಮಾರ್ಕನು ಹೇಳುತ್ತಾನೆ, "ವಾರದ ಮೊದಲನೆಯ ದಿನದ ಬೆಳಿಗ್ಗೆ ಹೊತ್ತು ಮೂಡುವಾಗ ಅವರು ಸಮಾಧಿಯ ಬಳಿಗೆ ಬಂದರು" (ಮಾರ್ಕ 16:2; NIV). "ವಾರದ ಮೊದಲನೆಯ ದಿವದಲ್ಲಿ ಇನ್ನೂ ಮೊಬ್ಬಿರುವಾಗ" ಎಂದು ಲೂಕನು ಹೇಳುತ್ತಾನೆ (ಲೂಕ 24:1).[5] ಸ್ತ್ರೀಯರು ಬೆಳಗಿನ ಜಾವದಲ್ಲಿ ಬರುವದು - ಅವರಿಗೆ ದೊರೆತ ಮೊದಲನೆಯ ಅವಕಾಶ - ಕ್ರಿಸ್ತನ ಕುರಿತು ಅವರಿಗಿರುವ ಆಳವಾದ ಸಮರ್ಪಣೆಯ ಸೂಚನೆಯಾಗಿದೆ.

**ಮಗ್ದಲದ ಮರಿಯಳೂ ಮತ್ತು ಬೇರೆ ಮರಿಯಳೂ** ಇಲ್ಲಿ ಹೆಸರಿಸಲಾಗಿದೆ. ಅವರು ಯೇಸು ಮರಣಹೊಂದುತ್ತಿರುವದನ್ನು ದೂರದಲ್ಲಿ ನಿಂತು ವೀಕ್ಷಿಸುತ್ತಿದ್ದರು, ಅವರು ಆತನ ದೇಹವನ್ನು ಯಾವ ಸ್ಥಳದಲ್ಲಿ ಸಮಾಧಿಮಾಡಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದ್ದರು (ನೋಡಿರಿ ವ್ಯಾಖ್ಯಾನ 27:55, 56, 61). ಮಾರ್ಕನು ಪಟ್ಟಿಯಲ್ಲಿ ಸಲೋಮಿಯನ್ನು ಸೇರಿಸಿದ್ದಾನೆ (ಮಾರ್ಕ 16:1), ಆದರೆ ಲೂಕನು ಯೋಹಾನನ್ನು ಮತ್ತು "ಇತರ ಸ್ತ್ರೀಯರನ್ನು" ಸೇರಿಸುತ್ತಾನೆ (ಲೂಕ 24:10; ನೋಡಿರಿ 8:3).

ಈ ಸ್ತ್ರೀಯರು **ಸಮಾಧಿಯನ್ನು ವೀಕ್ಷಿಸಲು** ಬಂದಿದ್ದರು ವಿಶೇಷವಾಗಿ ಯೇಸುವಿನ ದೇಹಕ್ಕೆ ಸುಗಂಧ ದ್ರವ್ಯಗಳನ್ನು ಲೇಪಿಸುವದಕ್ಕಾಗಿ ಬಂದಿದ್ದರು (ಮಾರ್ಕ 16:1). ಯೋಸೇಫನು ಮತ್ತು ನಿಕೋದೇಮನು ಈಗಾಗಲೇ ಆತನ ದೇಹಕ್ಕೆ ತೈಲಾಭಿಷೇಕವನ್ನು ಮಾಡಿದ್ದರು (ಯೋಹಾನ 19:39, 40), ಆದರೆ ಸಬ್ಬತ್ 6.00 ಗಂಟೆ ಪ್ರಾರಂಭವಾಗುವ ಮೊದಲು ಆತನ ದೇಹವನ್ನು ಹೂಣಿಡಬೇಕೆಂದು ಅವಸರಲ್ಲಿ ಮಾಡಿದ್ದರು. ಸ್ತ್ರೀಯರು ಪರಿಪೂರ್ಣವಾಗಿ ಸುಗಂಧದ್ರವ್ಯವನ್ನು ಲೇಪಿಸಲು ಬಯಸಿದ್ದರು.

ಅವರು ಸಮಾಧಿಯ ಬಳಿಗೆ ಬರುತ್ತಿರುವ ಹಾಗೆ, ಅವರು ಪ್ರವೇಶದ್ವಾರಕ್ಕೆ ಉರುಳಿಸಿದ ಆ ದೊಡ್ಡ ಬಂಡೆಯನ್ನು ಉರುಳಿಸುವದು ಹೇಗೆ ಎಂದು ತಮ್ಮತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು (ಮಾರ್ಕ 16:3). ಪಿಲಾತನು ಸಮಾಧಿಗೆ ರೋಮಾ ಸರಕಾರದ ಮುದ್ರೆಯನ್ನು ಹಾಕಲು ಆಜ್ಞಾಪಿಸಿದ್ದಾನೆ ಮತ್ತು ಯೆಹೂದ್ಯ ನಾಯಕರ ಬೇಡಿಕೆಯ ಮೇರೆಗೆ ಕಾವಲುಗಾರರನ್ನು ನೇಮಿಸಿದ್ದಾನೆ ಎಂಬುದು ಅವರಿಗೆ ತಿಳಿದಿರಲಿಲ್ಲ (27:62-66). ಸ್ತ್ರೀಯರು ಖಂಡಿತವಾಗಿಯೂ ಯೇಸುವಿನ ದೇಹವನ್ನು ಸಮಾದಿಯಲ್ಲಿ ನಿರೀಕ್ಷಿಸಿದ್ದರು.

**ವಚನ 2. ಇಗೋ** (*idou*) ಎಂಬ ಗ್ರೀಕ್ ಪದವನ್ನು ಸಂಗತಿಗಳ ಭಾವೋದ್ವಿಘನತೆಯನ್ನು ಸೂಚಿಸಲು ಮೇಲಿಂದ ಮೇಲೆ ಉಪಯೋಗಿಸಲಾಗಿದೆ (28:2, 7, 9, 11, 20). ಆ ಸಮಯದಲ್ಲಿ, **ಮಹಾ ಭೂಕಂಪವಾಗಿ** ಕ್ಷೇತ್ರವನ್ನೆಲ್ಲಾ ನಡುಗಿತು. Michael J. Wilkinsರ

ಪ್ರಕಾರ, "ಪಾಲೇಸ್ತೀನ ದೇಶದ ಒಂದು ಮುಖ್ಯ ಭೌಗೋಳಿಕ ಲಕ್ಷಣವೆಂದರೆ ಭೂಕಂಪಕ್ಕೆ ಒಲವನ್ನು ತೋರಿಸುವದು" ಎಂದು ಹೇಳುತ್ತಾರೆ. ಇದು ವಿಶೇಷವಾಗಿ ಸತ್ಯವಾಗಿತ್ತು ಯಾಕೆಂದರೆ "ಯೋದಾನ ನದಿಯ ಕಣಿವೆಯ ಬಿರುಕು ವಿಶಾಲವಾದ ಕ್ಷೇತ್ರದ ಭಾಗವಾಗಿದೆ ಇದು ಅಕ್ವಾಬ ಕೊಲ್ಲಿಯ ಪ್ರದೇಶದಿಂದ ಉತ್ತರಕ್ಕೆ 683 ಮೈಲುಗಳು ತಾವ್ರೋರ್ ಸಾಲಿನ ಕೆಳಮಟ್ಟದವರೆಗೆ ಹರಡಿದೆ."[6] ಆದಾಗ್ಯೂ, ಇದು ಸಾಮಾನ್ಯವಾದ ಭೂಕಂಪವಲ್ಲ. ಗ್ರೀಕ್ ಸಮಚ್ಚ ಕಾರಣವನ್ನು (*gar*) ಸೂಚಿಸುತ್ತದೆ. **ಕರ್ತನ ದೂತನೊಬ್ಬನು** ಇದಕ್ಕೆ ಜವಾಬ್ದಾರನಾಗಿದ್ದಾನೆ. ಭೂಕಂಪನಗಳು ಸತ್ಯವೇದದಲ್ಲಿ ದೇವರ ಅಥವಾ ದೇವದೂತರ ಪ್ರತ್ಯಕ್ಷತೆಯೊಂದಿಗೆ ಮತ್ತು ನ್ಯಾಯತೀರ್ಪಿನ ಕಾರ್ಯದೊಂದಿಗೆ ಜೋಡಣೆಯಾಗಿದೆ (1 ಅರಸುಗಳು 19:12; ಮತ್ತಾಯ 24:7; ಅಪೊಸ್ತಲರ ಕೃತ್ಯಗಳು 16:26; ಪ್ರಕಟಣೆ 6:12; 8:5; 11:13, 19; 16:18).[7] ಭೂಕಂಪವು ಶೂಲುಜೆಗೆ ಹಾಕಿದ ಸಮಯದಲ್ಲೂ ಮತ್ತು ಪುನರುತ್ಥಾನದ ಸಮಯದಲ್ಲಿ ಎರಡು ಘಟನೆಗಳಲ್ಲಿ ಸಂಭವಿಸಿತು (27:51; 28:2).

ಈ ವಿಷಯದಲ್ಲಿ, ಮತ್ತಾಯ ಮತ್ತು ಮಾರ್ಕನು ಒಬ್ಬ ದೇವದೂತನನ್ನು ಉಲ್ಲೇಖಿಸುತ್ತಾರೆ. ಮಾರ್ಕನು "ಆತನನ್ನು ಯೌವನಸ್ಥನೆಂದು ... ಬಿಳಿ ವಸ್ತ್ರವನ್ನು ಧರಿಸಿದ್ದನೆಂದು" ವರ್ಣಿಸುತ್ತಾನೆ (ಮಾರ್ಕ 16:5). ಲೂಕನು "ಇಬ್ಬರು ಪುರುಷರು ... ಹೊಳೆಯುವ ಬಿಳಿಬಟ್ಟೆಯನ್ನು ಧರಿಸಿದವರು" ಎಂದು ಚಿತ್ರಿಸುತ್ತಾನೆ (ಲೂಕ 24:4). ಯೋಹಾನನು ಸಹ ಸಮಾಧಿಯ ಬಳಿಯಲ್ಲಿ "ಇಬ್ಬರು ದೇವದೂತರು" ಎಂದು ಹೇಳುತ್ತಾನೆ (ಯೋಹಾನ 20:12). ಮತ್ತಾಯನು ಆಗಾಗ್ಗೆ ಜೋಡಿ ಪದಗಳನ್ನು ಉಪಯೋಗಿಸುತ್ತಾನೆ ಆದರೆ ಅದೇ ಸಮಯದಲ್ಲಿ, ಸುವಾರ್ತೆಯ ಇತರ ಬರಹಗಾರರು ಏಕಪದಗಳನ್ನು ಉಪಯೋಗಿಸುತ್ತಾರೆ (ನೋಡಿರಿ ವ್ಯಾಖ್ಯಾನ 8:28; 20:30; 21:2).

ವ್ಯತ್ಯಾಸವೇಕಿದೆ? ಮತ್ತಾಯ ಮತ್ತು ಮಾರ್ಕ ಸಂದೇಶದ ಪ್ರಾಮುಖ್ಯ ಅಂಶವನ್ನು ಪ್ರಕಟಿಸಿದವರಿಗೆ ಹೆಚ್ಚು ಒತ್ತು ನೀಡುತ್ತಾರೆ, ಲೂಕನು ಇಬ್ಬರು ದೇವದೂತರು ಸ್ತ್ರೀಯೊಂದಿಗೆ ಮಾತನಾಡಿದರು ಎಂದು ಸೂಚಿಸುತ್ತಾನೆ (ಲೂಕ 24:5). ಅವರು ಬೇರೆ ಬೇರೆ ದೃಷ್ಟಿಕೋನವನ್ನು, ಹಲವು ಬೇರೆ ಬೇರೆ ಜನರು ಮತ್ತು ಇಬ್ಬರು ದೇವದೂತರೊಂದಿಗೆ ಒದಗಿಸುತ್ತಾರೆ. ಬಹುಶಃ ಒಬ್ಬ ದೇವದೂತನು ಪ್ರಾಮುಖ್ಯವಾದ ಸ್ಥಳದಲ್ಲಿ ನಿಂತಿರಬಹುದು, ಅದೇ ಸಮಯದಲ್ಲಿ ಇನ್ನೊಬ್ಬನು ಅಷ್ಟೊಂದು ಪ್ರಾಮುಖ್ಯವಾದ ಸ್ಥಳದಲ್ಲಿ ನಿಂತಿರಬಹುದು, ಅದೇ ಸಮಯದಲ್ಲಿ ಇನ್ನೊಬ್ಬನು ಅಷ್ಟೊಂದು ಪ್ರಾಮುಖ್ಯವಾದ ಸ್ಥಳದಲ್ಲಿ ನಿಂತಿರಲಿಕ್ಕಿಲ್ಲ. ಪ್ರತಿಯೊಬ್ಬರು ಒಂದಲ್ಲ ಒಂದು ಸಮಯದಲ್ಲಿ ಸ್ತ್ರೀಯೊಂದಿಗೆ ಮಾತನಾಡಿದರು. ಎಲ್ಲಾ ನಾಲ್ಕು ಸುವಾರ್ತೆಗಳ ಬರಹಗಾರರು ಪ್ರಾಮುಖ್ಯವಾದ ವಿವರಗಳನ್ನು ನೀಡುತ್ತಾರೆ.

**ಕರ್ತನ ದೂತನು ಆಕಾಶದಿಂದ ಇಳಿದು ಬಂದು ಕಲ್ಲನ್ನು ಬಾಗಲಿನಿಂದ ಉರುಳಿಸಿ ಅದರ ಮೇಲೆ ಕೂತುಕೊಂಡನು** (ನೋಡಿರಿ ವ್ಯಾಖ್ಯಾ 27:60). ದೂತನ ಶಕ್ತಿ - ದೇವದೂತರ ಬಲ - ಸಮಾಧಿಯ ಕಲ್ಲನ್ನು ಉರುಳಿಸಿತು ಮತ್ತು ಭೂಕಂಪಕ್ಕೆ ಕಾರಣವಾಯಿತು. ದೇವದೂತನು ಕಲ್ಲನ್ನು ಉರುಳಿಸಿದ ಮೇಲೆ, ಆತನು ಯೆಹೂದಿ ನಾಯಕರು ಅದರ ಮೇಲೆ ಹಾಕಿದ ಮುದ್ರೆಯನ್ನು ಒಡೆದು ಬಿಟ್ಟನು (ನೋಡಿರಿ ವ್ಯಾಖ್ಯಾನ 27:66). ಆತನು ಕಲ್ಲನ್ನು ಉರುಳಿಸುವವರು ಯಾರು ಎಂಬ ಸ್ತ್ರೀಯರ ಗಲಿಬಿಲಿಯನ್ನು ಸಹ ಪರಿಹರಿಸಿದನು (ಮಾರ್ಕ 16:3). ಕಲ್ಲಿನ ಮೇಲೆ ಆತನು ಕುಳಿತಿರುವದು ಆತನು ಪರಿಪೂರ್ಣಗೊಳಿಸಿದ ಕಾರ್ಯ, ಅಧಿಕಾರ ಮತ್ತು ದೇವರ ಮುಖ್ಯ ಉದ್ದೇಶವನ್ನು ತೋರಿಸುತ್ತದೆ.

**ವಚನ 3. ದೇವದೂತನ ಮುಖಭಾವವು ಮಿಂಚಿನಂತೆ ಇತ್ತು, ಅವನ ಉಡುಪು ಹಿಮದಂತೆ ಬೆಳ್ಳಗಿತ್ತು** (ನೋಡಿ ಮಾರ್ಕ 16:5; ಲೂಕ 24:4; ಯೋಹಾನ 20:12). ಮತ್ತಾಯನ ಸುವಾರ್ತೆಯಲ್ಲಿರುವ ವರ್ಣನೆ ದೇವದೂತನ ಪ್ರಕಾಶದೊಂದಿಗೆ ಸಂಬಂಧಿಸಿದೆ. "ಮಿಂಚು" "ಪರಲೋಕ ಜೀವಿಗಳು ಕಾಣಿಸಿಕೊಳ್ಳುವದರೊಂದಿಗೆ ಸಂಬಂಧವನ್ನು ಹೊಂದಿದೆ

(ದಾನಿಯೇಲ 10:6) ಮತ್ತು ಸೈತಾನನ ಪತನ (ಲೂಕ 10:18) ಮತ್ತು ಮನುಷ್ಯಕುಮಾರನ ಬರೋಣ (ಮತ್ತಾಯ 24:27)."[8] ವಾಕ್ಯಭಾಗದಲ್ಲಿ ಬಿಳಿ ಬಟ್ಟೆ ಪವಿತ್ರತೆ ಮತ್ತು ಪರಿಶುದ್ಧತೆ ಯನ್ನು ಸೂಚಿಸುತ್ತದೆ (ದಾನಿಯೇಲ 7:9; ಮತ್ತಾಯ 17:2; ಪ್ರಕಟಣೆ 3:4, 5, 18; 4:4; 6:11; 7:9, 13, 14; 19:14). "ಹಿಮದಂತೆ ಬಿಳುಪು" ಇದು ಸಹ ಸತ್ಯವೇದದ ಹೋಲಿಕೆಯಲ್ಲಿ ಸಾಮಾನ್ಯವಾಗಿದೆ (ಕೀರ್ತನೆ 51:7; ಯೆಶಾಯ 1:18; ದಾನಿಯೇಲ 7:9; ಪ್ರಕಟಣೆ 1:14).

**ವಚನ 4.** ಸಮಾಧಿಯ ಬಳಿಯಲ್ಲಿದ್ದ ಕಾವಲುಗಾರರು ಭಯಭೀತರಾದರು. **ಕಾವಲುಗಾರರು ಅವನಿಗೆ (ದೇವದೂತನಿಗೆ) ಹೆದರಿ ನಡುಗಿ ಸತ್ತವರ ಹಾಗಾದರು** (ನೋಡಿರಿ ಪ್ರಕಟಣೆ 1:17). ಇಲ್ಲಿ Robert H.Gundry ಅವರ ಪದಗಳನ್ನು ಉಪಯೋಗಿಸಬೇಕು, "ಹಾಸ್ಯಸ್ಪದವಾದ ಅದಲು ಬದಲು, ಯೇಸು ಜೀವಿತವಾಗಿದ್ದಾನೆ,[9] ಕಾವಲುಗಾರರು ಸತ್ತವರ ಹಾಗೆ ಕಾಣುತ್ತಿದ್ದಾರೆ" ಮುಂದೆ, ಅವರು ಚೇತರಿಸಿಕೊಂಡ ಮೇಲೆ, ಕೆಲವು ಯೆರೂಸಲೇಮಿ ನೊಳಕ್ಕೆ ಹೋದರು ಮತ್ತು ಸಂಭವಿಸಿದೆಲ್ಲವನ್ನು ಮಹಾಯಾಜಕರಿಗೆ ತಿಳಿಸಿದರು (28:11).

**ವಚನ 5. ಸ್ತ್ರೀಯರು** ಸಮಾಧಿಯ ಬಳಿ ಬರುವಾಗ ಕಲ್ಲು ಉರುಳಿಹೋಗಿರುವದನ್ನು ನೋಡಿ ಬಹಳ ಆಶ್ಚರ್ಯಚಕಿತರಾಗಿದ್ದರು! ಯೇಸುವನ್ನು ಹೊರಕ್ಕೆ ಹೋಗುವದಕ್ಕೆ ಅನುಮತಿಸಲು ಇದನ್ನು ತೆಗೆಯಲಿಲ್ಲ; ಅವನು ಕಲ್ಲು ಅದರ ಸ್ಥಳದಲ್ಲಿ ಇರುವಾಗಲೇ ಆ ಸ್ಥಳವನ್ನು ಬಿಟ್ಟು ಹೋಗಿದ್ದನು.[10] ಬದಲಾಗಿ! ಆತನ ಶಿಷ್ಯರು ಒಳಗೆ ಹೋಗಲೆಂದು ಕಲ್ಲು ಉರುಳಿಸಲ್ಪಟ್ಟಿತ್ತು. ಸಮಾಧಿಯನ್ನು ಪ್ರವೇಶಿಸಿದ ನಂತರ, ಯೇಸುವಿನ ದೇಹವನ್ನು ಅಲ್ಲಿಂದ ಹೋಗಿದ್ದನ್ನು ನೋಡಿದರು ಮತ್ತು ಅವರು ಇದರ ಕುರಿತಾಗಿ "ಗಲಿಬಿಲಿಗೆ ಒಳಗಾದರು" (ಲೂಕ 24:3, 4).

**ದೇವದೂತನು** ಸ್ತ್ರೀಯರಿಗೆ **ಭಯಪಡಬೇಡಿರಿ** ಎಂಬ ಮರುಭರವಸೆಯನ್ನು ನೀಡಿದರು. ಹಲವು ಸಂದರ್ಭಗಳಲ್ಲಿ ದೇವದೂತರು ಅವರ ವಿಮರ್ಷೆಗೆ ಈ ಅಪ್ಪಣೆಯ ಮೂಲಕ ತಮ್ಮ ಪೀಠಿಕೆಯನ್ನು ನೀಡಿದ್ದಾರೆ (1:20; ಲೂಕ 1:13, 30; 2:10). ದೈವೀಕ ಸಂದೇಶಕರಾಗಿ ಅವರು ನೀತಿವಂತರನ್ನು ಭಯಪಡಿಸುವದಕ್ಕಾಗಿ ಬಂದಿಲ್ಲ.[11] ಬದಲಾಗಿ, ದೇವದೂತರು ಎಲ್ಲಾ ಕಾರ್ಯಗಳನ್ನು ಅವರ ಒಳ್ಳೆಯದಕ್ಕೆ ಮಾಡುತ್ತಾನೆ ಎಂದು ಅವರಿಗೆ ನೆಮ್ಮದಿಯನ್ನು ನೀಡುವದಕ್ಕಾಗಿ ಬಂದಿದ್ದಾರೆ. ಚಿಂತೆ ಮತ್ತು ಭಯಕ್ಕೆ ಮದ್ದು ಎಂದರೆ ದೇವರಲ್ಲಿ ವಿಶ್ವಾಸವನ್ನು ಇಡುವದು.

ದೇವದೂತನು ಮುಂದುವರೆದು, **ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತಿರೆಂದು ಬಲ್ಲೆನು** ಎಂದು ಹೇಳುತ್ತಾನೆ. ಅವರು ಕ್ರೂಜೆಗೆ ಹಾಕಲ್ಪಟ್ಟ ಯೇಸುವಿನ ದೇಹವನ್ನು ಹುಡುಕಿಕೊಂಡು ಸಮಾಧಿಯ ಬಳಿಗೆ ಬಂದಿದ್ದಾರೆ ಎಂದು ಆತನಿಗೆ ತಿಳಿದದೆ (1 ಕೊರಿಂಥ 1:23; 2:2; ಗಲಾತ್ಯ 3:1).

**ವಚನ 6.** ಯೋಸೇಫನು ಯೇಸುವನ್ನು ದೇಹವನ್ನು ಹೂಣಿಡುವದಕ್ಕೆ ಸಾಕ್ಷಿಯಾಗಿದ್ದ ಸ್ತ್ರೀ (27:61) ಈಗ ಖಾಲಿಯಾಗಿದ್ದ ಸಮಾಧಿಯನ್ನು ನೋಡಿತ್ತಿದ್ದಾಳೆ. ದೇವದೂತನು **ಆತನು ಎದ್ದಿದ್ದಾ** ಅಲ್ಲಿ ಕಾಣೆಯಾಗಿರುವ ಮಾಹಿತಿಯನ್ನು ಒದಗಿಸುತ್ತಾನೆ: ಗ್ರೀಕ್ ಕ್ರಿಯಾಪದ (*ēgerthē*; from *egeirō*) ಅದು ಕರ್ಮಣಿ ಪ್ರಯೋಗದಲ್ಲಿದ್ದರೂ ಕೆಲವೊಂದು ಅವತರಣಿಕೆಗಳು "ಅವನು ಎದ್ದಿದ್ದಾನೆ" (TEV; NEB; NRSV; NLT; JNT) ಎಂಬುದಾಗಿವೆ. ಕರ್ಮಣಿ ಪ್ರಯೋಗ ದೇವರ ಕಾರ್ಯಚರಣೆ ಕಾರ್ಯರೂಪದಲ್ಲಿರುವದನ್ನು ಒತ್ತಿ ಹೇಳುತ್ತದೆ. CEV ಈ ವಿಚಾರವನ್ನು ಅನುವಾದದೊಂದಿಗೆ ಸ್ಪಷ್ಟಪಡಿಸುತ್ತದೆ. "ದೇವರು ಆತನನ್ನು ಜೀವದಿಂದ ಎಬ್ಬಿಸಿದ್ದಾನೆ." ಯೆಹೂದ್ಯ ನಾಯಕರು ಯೇಸುವನ್ನು ಕ್ರೂಜೆಗೆ ಹಾಕುವದರ ಮೂಲಕ ಜೀವದನಾಯಕನನ್ನು ಕೊಂದರು; ಆದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು (ಅಪೊಸ್ತಲರ ಕೃತ್ಯಗಳು 3:14, 15).

ಸುವಾರ್ತೆಯ ಬರಹಗಾರರು ಯೇಸುವಿನ ನಿಜವಾದ ಪುನರುತ್ಥಾನವನ್ನು

ವರ್ಣಿಸುವದಿಲ್ಲ. ಅವನ ಆತ್ಮವು ಆತನ ದೇಹಕ್ಕೆ ಹೊಸ ಜೀವ ನೀಡಿದ್ದನ್ನು, ಅವರು ಆತನು ಸಮಾಧಿಯ ವಸ್ತ್ರಗಳನ್ನು ಕಳಚಿದ್ದನ್ನು ವರದಿಮಾಡುವದಿಲ್ಲ (ನೋಡಿರಿ ಯೋಹಾನ 20:4-7) ಅಥವಾ ಆತನು ಸಮಾಧಿಯಿಂದ ಹೋದದ್ದನ್ನು ವರದಿಮಾಡುವದಿಲ್ಲ. ಬದಲಾಗಿ ಅವರು (1) ಸಮಾಧಿ ಖಾಲಿಯಾಗಿದ್ದನ್ನು, (2) ಯೇಸು ತಿರುಗಿ ಜೀವಿತನಾಗಿದ್ದನ್ನು, ಮತ್ತು (3) ಆತನ ಪುನರುತ್ಥಾನ ದೃಢರಡುವ ಪ್ರಕ್ರಿಯೆಯಲ್ಲಿರುವದನ್ನು ವರದಿಮಾಡುತ್ತಾರೆ.

**ಆತನು ಹೇಳಿದ ಹಾಗೆ,** ಎಂಬ ವಾಕ್ಯಭಾಗವು ಪುನರುತ್ಥಾನವು ಯೇಸುವಿನ ಪುನರಾವರ್ತಿತ ಪ್ರವಾದನೆಯ ನೆರವೇರಿಕೆಯಾಗಿತ್ತು ಎಂದು ಸೂಚಿಸುತ್ತದೆ (ನೋಡಿರಿ ವ್ಯಾಖ್ಯಾನ 27:62, 63). ಅವನು ಯಾವಾಗಲೂ ತನ್ನ ಶಿಷ್ಯರಿಗೆ ಸತ್ಯವನ್ನು ಹೇಳಿದನು, ಅದು ಅವರಿಗೆ ಸಹಿಸಿಕೊಳ್ಳಲು ಸಾಧ್ಯವಿಲ್ಲದಾಗಲೂ ಸಹ (16:21-23; 26:21, 22, 31-35). ತನ್ನ ಮರಣ ಮತ್ತು ಪುನರುತ್ಥಾನದ ಕುರಿತು ಆತನು ನಿಜವಾಗಿ ಎದಿದ್ದಾನೆ ಆತನ ಪ್ರವಾದನೆ ಆತನ ಹಿಂಬಾಲಕರಿಗೆ ನಿಧಾನವಾಗಿ ಸತ್ಯವನ್ನು ಸ್ವೀಕರಿಸಲು ಸಹಾಯವಾಯಿತು (ಲೂಕ 24:6, 8).

ಸ್ತ್ರೀಯರು ಸಮಾಧಿಯಲ್ಲಿ ಸಹಜವಾಗಿ ಈಗಾಗಲೇ ನೋಡಿದ್ದಾಗ್ಯೂ (ಲೂಕ 24:3), ದೇವ ದೂತರು ಅವರನ್ನು ಇನ್ನೂ ಸಮೀಪದಿಂದ ವೀಕ್ಷಿಸುವಂತೆ ಆಮಂತ್ರಿಸಿದರು: **ಬನ್ನಿ ಆತನು ಮಲಗಿದ್ದ ಸ್ಥಳವನ್ನು ನೋಡಿರಿ.** ಆತನು ಅವರ ಮನಸ್ಸಿನಲ್ಲಿ ಕ್ರಿಸ್ತನು ಹೋಗಿದ್ದಾನೆ ಎಂಬ ಯಾವ ಭಾವನೆಯೂ ಅವರ ಮನಸ್ಸಿನಲ್ಲಿ ಉಳಿಯಬಾರದು ಎಂದು ಆತನು ಬಯಸಿದನು.

ಅದೇ ಸಮಯದಲ್ಲಿ ಸತ್ಯವೇದವು ಕೇಲವು ಜನರ ಪುನರುತ್ಥಾನದ ಕುರಿತು ವರದಿ ಮಾಡುತ್ತದೆ - ಯೇಸುವಿನ ಸೇವೆಯಲ್ಲಿ ಬಹುಶಃ ಆತನ ಪುನರುತ್ಥಾನವೇ ವಿಶಿಷ್ಟವಾಗಿತ್ತು. ಎರಡನೆಯ ಬಾರಿ ಮರಣದಿಂದ ಎದ್ದು ಬಂದ ಅನುಭವವನ್ನು ಹೊಂದಿದವರನ್ನು ಯೇಸು ಮತ್ತೇ ಎಂದಿಗೂ ಮರಣ ಹೊಂದದಂತೆ ಎಬ್ಬಿಸಿದ್ದಾನೆ (ರೋಮಾಪುರ 6:9). ಪ್ರತಿಯೊಬ್ಬ ಯೆಹೂದ್ಯನು ತನ್ನ ದೇಹದ ಮತ್ತು ಇತರ ಜನರ ಪುನರುತ್ಥಾನವನ್ನು ನಿರೀಕ್ಷಿಸಿದನು; ಈ ಭಾನುವಾರದ ಬೆಳಗಿನ ಜಾವದಲ್ಲಿ ಯೇಸು ಈ ಆಳವಾದ ದಾಹದ ಪ್ರಥಮ ಫಲವಾದನು (1 ಕೊರಿಂಥ 15:20, 23).[12] ಇದು ಸತ್ಯವಾಗಿರುವಾಗ, ನಿತ್ಯಜೀವಕ್ಕಾಗಿ ಪುನರುತ್ಥಾನವು ಕೇವಲ ಕ್ರಿಸ್ತನನ್ನು ನಂಬುವವರು ಮತ್ತು ವಿಧೇಯರಾಗುವವರಿಗೆ ಮಾತ್ರ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು (1 ಕೊರಿಂಥ 15:57, 58).

**ವಚನ 7.** ದೇವದೂತನು ಸ್ತ್ರೀಗೆ ಸೂಚಿಸಿದನು, **ಬೇಗ ಹೋಗಿ ಆತನ ಶಿಷ್ಯರಿಗೆ** ಯೇಸು ತಿರುಗಿ ಬದುಕಿದ್ದಾನೆ. ದೈವೀಕ ಸಂದೇಶವಾಹಕನು ನಿಜವಾಗಿಯೂ ಪೇತ್ರನಿಗೆ ಮಾತ್ರ ಹೇಳಿದನು (ಮಾರ್ಕ 16:7). ಪೇತ್ರನು ಮೂರು ಸಾರಿ ಅಲ್ಲಗಳೆದ ಮೇಲೆ ಆತನಲ್ಲಿ ನಿರೀಕ್ಷೆಯನ್ನು ತುಂಬುವದಕ್ಕಾಗಿ ಹೀಗೆ ಮಾಡಿದನು ಎಂಬುದರಲ್ಲಿ ಸಂಶಯವಿಲ್ಲ (ಮತ್ತಾಯ 26:69-75).

**ಆತನು ಅವರ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ ಎಂದು** ಎಂದು ಶಿಷ್ಯರಿಗೆ ಹೇಳುವದಕ್ಕೆ ಸ್ತ್ರೀಯರಿಗೆ ಸಹ ಅಪ್ಪಣೆಯಾಯಿತು. ಮಾರ್ಕ 16:7ರಲ್ಲಿ ಹೆಚ್ಚಿನ ಪದಗಳನ್ನು ಹೊಂದಿದೆ, "ಅವನು ಹೇಳಿದ ಹಾಗೆ." ಈ ಮಾರ್ಗದರ್ಶನವು ಯೇಸು ತನ್ನ ಮರಣಕ್ಕೆ ಪೂರ್ವದಲ್ಲಿ ಅವರಿಗೆ ಸೂಚಿಸಿದ್ದರಿಂದಾಗಿ (ನೋಡಿರಿ ವ್ಯಾಖ್ಯಾನ 26:32).

ಕರ್ತನು ಮತ್ತು ಆತನ ಅಪೊಸ್ತಲರು ಒಂದು ಚಿರಪರಿಚಿತವಾದ ಸ್ಥಳದಲ್ಲಿ - ಯೇಸು ನಿರ್ಧರಿಸಿದ ಬೆಟ್ಟದ ಮೇಲೆ ಸೇರಿಬರಬೇಕಾಗಿತ್ತು (28:16). ಗಲಿಲಾಯದ ಕ್ಷೇತ್ರದಲ್ಲಿ ಅವರೆಲ್ಲರು ವಾಸವಾಗಿದ್ದರು. ಈ ಕ್ಷೇತ್ರದಲ್ಲಿ ಯೇಸು ತನ್ನ ಹೆಚ್ಚಾದ ಸೇವೆಯನ್ನು ಸಹ ಮಾಡಿದ್ದನು. ಗಲಿಲಾಯದಲ್ಲಿ, ಯೆರೂಸಲೇಮಿನ ನಾಯಕರ ಯಾವುದೇ ಅಡತಡೆ ಅವರಿಗಿರಲಿಲ್ಲ.

## ಬೆರಗುಗೊಳಿಸುವ ಸಾಕ್ಷಿಗಳು (28:8-10)

**[8]ಅವರು ಭಯದಿಂದಲೂ ಮಹಾ ಸಂತೋಷದಿಂದಲೂ ಬೇಗ ಸಮಾಧಿಯ ಬಳಿಯಿಂದ ಹೊರಟು ಆತನ ಶಿಷ್ಯರಿಗೆ ತಿಳಿಸುವದಕ್ಕೆ ಓಡಿಹೋದರು. [9]ಆಗ ಯೇಸು ಅವರ ಎದುರಿಗೆ ಬಂದು - ನಿಮಗೆ ಶುಭವಾಗಲಿ ಅಂದನು. ಅವರು ಹತ್ತರಕ್ಕೆ ಬಂದು ಆತನ ಪಾದಗಳನ್ನು ಹಿಡಿದು ಆತನಿಗೆ ನಮಸ್ಕಾರಮಾಡಿದರು. [10]ಯೇಸು ಅವರಿಗೆ - ಹೆದರಬೇಡಿರಿ; ನನ್ನ ಸಹೋದರರ ಬಳಿಗೆ ಹೋಗಿ ಅವರು ಗಲಿಲಾಯಕ್ಕೆ ಹೋಗಬೇಕೆಂದು ಹೇಳಿರಿ; ಅಲ್ಲಿ ನನ್ನನ್ನು ನೋಡುವರು ಎಂದು ಹೇಳಿದನು.**

**ವಚನ 8.** ಸ್ತ್ರೀಯರು **ಬೇಗ ಸಮಾಧಿಯ ಬಳಿಯಿಂದ ಹೊರಟರು,** ಅವರ ಹೃದಯವು ಗಲಿಬಿಲಿಯ ಭಾವನೆಗಳಿಂದ ತುಂಬಿತ್ತು. ಮಾರ್ಕ 16:18 ಹೇಳುವಂತೆ, "ಅವರು ಭ್ರಮೆ ಹಿಡಿದವರಾಗಿ ನಡುಗುತ್ತಾ ಹೊರಕ್ಕೆ ಬಂದು ಸಮಾಧಿಯ ಬಳಿಯಿಂದ ಓಡಿಹೋದರು; ಅವರು ಹೆದರಿಕೊಂಡದ್ದರಿಂದ ಯಾರಿಗೂ ಏನೂ ಹೇಳಲಿಲ್ಲ." ಅವರು ಭಯಹಿಡಿದವರಾಗಿದ್ದರು ಯಾಕೆಂದರೆ ಅವರು ದೇವದೂತರನ್ನು ನೋಡಿದ್ದರು ಮತ್ತು ಅದ್ಭುತವಾದ ಪುನರುತ್ಥಾನದ ಸಮಾಚಾರವನ್ನು ಎದುರಿಸಿದ್ದರು. ಆ ಅನುಭವವು ಅವರನ್ನು ಸಂಪೂರ್ಣವಾದ ಗೌರವದಿಂದ ತುಂಬಿಸಿತು, ಉತ್ತಮ ವಿಧದ ಭಯದಿಂದ. ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದನು ಎಂಬ ಸಮಾಚಾರ (28:6) ಅವರಲ್ಲಿ ಅತೀರ್ವ ಆನಂದವನ್ನು ಉಂಟುಮಾಡಿತು. ಅವರು ಯೇಸುವನ್ನು ಇನ್ನೂ ನೋಡದೇ ಇದ್ದಾಗಲೂ, ದೇವದೂತರ ಸಾಕ್ಷಿ ಮತ್ತು ಖಾಲಿಯಿರುವ ಸಮಾಧಿಯಿಂದಾಗಿ ಅವರು ಈ ಎರಡು ಭಾವನೆಗಳಲ್ಲಿ ತೇಲಿಹೋದರು. ಇದರ ಪರಿಣಾಮವಾಗಿ ಆ ಸ್ತ್ರೀಯರು ಇದನ್ನು ಆತನ ಶಿಷ್ಯರಿಗೆ ವರದಿ ಮಾಡುವದಕ್ಕೆ ಓಡಿಹೋದರು.

**ವಚನ 9.** ದಾರಿಯಲ್ಲಿ, **ಯೇಸು ಅವರನ್ನು ಬೇಟಿಯಾದನು ಮತ್ತು ನಿಮಗೆ ಶುಭವಾಗಲಿ ಅಂದನು.** ಈ ಹಂತದಲ್ಲಿ ಅವರು ಪುನರುತ್ಥಾನ ಹೊಂದಿದ ಕರ್ತನನ್ನು ತಾವೇ ನೋಡುವ ಸೌಭಾಗ್ಯವನ್ನು ಹೊಂದಿದರು. ಅವರು ಶಿಷ್ಯರನ್ನು ಕಂಡಾಗ, ಅವರ ಸಾಕ್ಷಿ ಪರರಿಂದ ತಿಳಿದುಕೊಂಡ ಮಾಹಿತಿಯಾಗಿರದೇ ಅವರ ವಯಕ್ತಿಕ ಜ್ಞಾನದ ಸಂಕೇತವಾಗಿತ್ತು.

ಆ ಸ್ತ್ರೀಯರು **ಹತ್ತರಕ್ಕೆ ಬಂದು ಆತನ ಪಾದಗಳನ್ನು ಹಿಡಿದು ಆತನಿಗೆ ನಮಸ್ಕಾರ ಮಾಡಿದರು.** "ನಮಸ್ಕಾರ" (*proskuneō*) ಎಂಬ ಪದ ಮತ್ತಾಯನ ಸುವಾರ್ತೆಯಲ್ಲಿ ಹದಿಮೂರು ಸಾರಿ ಕಂಡುಬರುತ್ತದೆ ಇದು ಒಬ್ಬನ ಪಾದಕ್ಕೆ ಗೌರವಪೂರ್ವಕವಾಗಿ ನಮಸ್ಕರಿಸುವದು ಎಂಬುದಾಗಿದೆ, ಆದರೆ ಉಳಿದ ಸಂದರ್ಭದಲ್ಲಿ ಇದು ಆತ್ಮೀಕ ಆರಾಧನೆಯನ್ನು ಸೂಚಿಸುತ್ತದೆ. ವಚನ 9 ಮತ್ತು 17ರಲ್ಲಿ ಈ ಪದವು ನಂತರ ಅರ್ಥದಲ್ಲಿ ಉಪಯೋಗಿಸ ಲಾಗಿದೆ (ನೋಡಿರಿ ವ್ಯಾಖ್ಯಾನ 2:2). ಯೇಸು ತನ್ನ ದೈವತ್ವದಿಂದಾಗಿ ಇಂಥಹಾ ಗೌರವವನ್ನು ಹೊಂದಿಕೊಂಡನು (14:33). ಇದಕ್ಕೆ ವಿಭಿನ್ನವಾಗಿ, ಹೊಸ ಒಡಂಬಡಿಕೆಯಲ್ಲಿ ದೇವದೂತರು ಮತ್ತು ಮನುಷ್ಯರು ಇದನ್ನು ತಿರಸ್ಕರಿಸಿದರು (ಅಪೊಸ್ತಲರ ಕೃತ್ಯಗಳು 10:25, 26; 14:11-15; ಪ್ರಕಟಣೆ 22:8, 9).

**ವಚನ 10.** ಯೇಸು ಸ್ತ್ರೀಯರಿಗೆ ದೇವದೂತರು ಅವರಿಗೆ ಹೇಳಿದ ಮಾತುಗಳನ್ನು ಶಿಷ್ಯರಿಗೆ ಹೇಳಬೇಕು ಎಂದು ಹೇಳಿದನು (28:7). **ಯೇಸು ಅವರಿಗೆ - ಹೆದರಬೇಡಿರಿ, ನನ್ನ ಸಹೋದರರ ಬಳಿಗೆ ಹೋಗಿ ಅವರು ಗಲಿಲಾಯಕ್ಕೆ ಹೋಗಬೇಕೆಂದು ಹೇಳಲಿ; ಅಲ್ಲಿ ನನ್ನನ್ನು ನೋಡುವರು ಎಂದು ಹೇಳಿದನು.** ಯೇಸು ಎದ್ದಿದ್ದಾನೆ ಎಂಬ ಸಂದೇಶವನ್ನು ಹಂಚಿಕೊಳ್ಳುವದಕ್ಕೆ ಮೊದಲು ಸ್ತ್ರೀಯರು ಆಯಲ್ಪಟ್ಟರು ಎಂಬುದು ವಿಶಿಷ್ಟತೆಯಾಗಿದೆ. ಈ ಉದಾಹರಣೆಯು ಸುವಾರ್ತೆಯ ಯಥಾರ್ಥತೆಯನ್ನು ತೋರಿಸುತ್ತದೆ Douglas R. A. Hareರವರು "ಸ್ತ್ರೀಯರು ಸ್ವರ್ದಾತ್ಮಕ ಸಾಕ್ಷಿಗಳೆಂದು ಯೆಹೂದ್ಯರ ಆಸ್ಥಾನದಲ್ಲಿ ಗೌರವಿಸದಿರುವ ಸಂದರ್ಭದಲ್ಲಿ, ಈ ಕಥಾನಕದಲ್ಲಿ

ಅವರ ಉಪಸ್ಥಿತಿ ಹೊರಗಿನವರ ಮೇಲೆ ಪ್ರಭಾವ ಬೀರುವದಕ್ಕೆ ಸೃಷ್ಟಿಸಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ."[13]

ಮತ್ತಾಯನು ಯೇಸು ಈ ಸ್ತ್ರೀಯರನ್ನು ಬೇಟಿಯಾದನಂತರ ಯೆರೂಸಲೇಮಿನಲ್ಲಿ ಏನು ನಡೆಯಿತು ಎಂಬುದನ್ನು ಹೇಳುವದಿಲ್ಲ. ಉಳಿದ ಸುವಾರ್ತೆಗಳು ಕ್ರಮಾನುಗತ ಪ್ರಕಾರ ಇವುಗಳನ್ನು ಖಚಿತವಾಗಿ ಮರುಚಿಸಲು ಸಾಧ್ಯವಿಲ್ಲದೇ ಹೋದಾಗಲು ಆ ಸಂಗತಿಗಳ ಕುರಿತು ಕೆಲವು ದಾಖಲೆಗಳನ್ನು ಒದಗಿಸುತ್ತದೆ. ಕೊನೆಯದಾಗಿ, ಶಿಷ್ಯರು ಯೇಸುವನ್ನು ಗಲಿಲಾಯದಲ್ಲಿ ಸಂಧಿಸಿದಾಗ್ಯೂ (28:16), ಅವರು ಮತ್ತೊಂದು ವಾರ ಯೆರೂಸಲೇಮಿನಲ್ಲಿಯೇ ಉಳಿದರು - ಅದು ಅವರಿಗೆ ಹುಳಿಯಿಲ್ಲದ ರೊಟ್ಟಿಯ ಹಬ್ಬವನ್ನು ಮುಗಿಸುವದಕ್ಕೆ ಸಹಾಯವಾಯಿತು. ಇತರ ಸುವಾರ್ತೆಗಳು ಸೂಚಿಸುವ ಹಾಗೆ ಈ ಅವಧಿಯಲ್ಲಿ ಯೇಸು ಅವರಿಗೆ ಈ ಸಮಯದಲ್ಲಿ ಹಲವು ಸಂದರ್ಭಗಳು ಕಾಣಿಸಿಕೊಂಡನು. ಆತನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಅವಧಿಯ ಮಧ್ಯದ ಈ ನಲವತ್ತು ದಿನಗಳ ಅವಧಿಯಲ್ಲಿ, ಇತರ ಕಾಣಿಸಿಕೊಳ್ಳುವಿಕೆಗಳು ಸಹ ಸಂಭವಿಸಿದವು (ಅಪೊಸ್ತಲರು ಕೃತ್ಯಗಳು 1:3).

## ಸುಳ್ಳು ವರದಿ (28:11-15)

**[11]ಅವರು ಹೋಗುತ್ತಿರುವಾಗ ಕಾವಲುಗಾರರಲ್ಲಿ ಕೆಲವರು ಪಟ್ಟಣದೊಳಕ್ಕೆ ಬಂದು ನಡೆದ ಸಂಗತಿಗಳನ್ನೆಲ್ಲಾ ಮಹಾಯಾಜಕರಿಗೆ ತಿಳಿಸಿದರು. [12]ಇವರು ಹಿರಿಯರ ಸಂಗಡ ಕೂಡಿಕೊಂಡು ಆಲೋಚನೆಮಾಡಿ [13]ಆ ಸಿಪಾಯಿಗಳಿಗೆ ಬಹಳ ಹಣಕೊಟ್ಟು - ಅವನ ಶಿಷ್ಯರು ರಾತ್ರಿಯಲ್ಲಿ ಬಂದು ನಾವು ನಿದ್ದೆ ಮಾಡುತ್ತಿರುವಾಗ ಅವನನ್ನು ಕದ್ದುಕೊಂಡು ಹೋದರು ಎಂದು ಹೇಳಿರಿ; [14]ಈ ಸುದ್ದಿ ದೇಶಾಧಿಪತಿಯ ಕಿವಿಗೆ ಬಿದ್ದರೆ ನಾವು ಅವನನ್ನು ಸಮಾಧಾನಪಡಿಸಿ ನಿಮಗೆ ಭಯವಿಲ್ಲದ ಹಾಗೆ ಮಾಡುತ್ತೇವೆ ಅಂದರು. [15]ಇವರು ಆ ಹಣವನ್ನು ತೆಗೆದುಕೊಂಡು ತಮಗೆ ಹೇಳಿಕೊಟ್ಟ ಹಾಗೆ ಮಾಡಿದರು. ಈ ಮಾತು ಇಂದಿನವರೆಗೂ ಯೆಹೂದ್ಯರಲ್ಲಿ ಹಬ್ಬಿ ಅದೆ.**

ಸುವಾರ್ತಾ ಬರಹಗಾರರರಲ್ಲಿ, ಕೇವಲ ಮತ್ತಾಯನು ಮಾತ್ರ ಯೇಸುವಿನ ಸಮಾಧಿಯ ಬಳಿಯಲ್ಲಿ ನೇಮಿಸಿದ ರೋಮನ್ ಸೈನಿಕರ ಕುರಿತು ಮಾತನಾಡುತ್ತಾನೆ (27:62-66). ಅವನು ದೇವದೂತರ ದರ್ಶನದಿಂದ ಅವರಲ್ಲಿ ಉಂಟಾದ ಭಯವನ್ನು (28:4) ಮತ್ತು ಯೆಹೂದ್ಯರಲ್ಲಿ ಹರಡಿದ ಅವರು ನೀಡಿದ ಸುಳ್ಳು ವರದಿಯನ್ನು ಸಹ ಉಲ್ಲೇಖಿಸುತ್ತಾನೆ (28:11-15).

**ವಚನ 11.** ಕೆಲವು [ರೋಮ] **ಸೈನಿಕರು** ಪ್ರಾರಂಭದಲ್ಲಿ ಹೊಂದಿದ ಅಘಾತದ ನಂತರ (28:4) **ಮಹಾಯಾಜಕರಿಗೆ ವರದಿ ಮಾಡಿದರು.** ಈ ಸೈನಿಕರನ್ನು ದೇಶಾಧಿಪತಿಯಾದ ಪಿಲಾತನ ಮೂಲಕ ಮಹಾಯಾಜಕರ ಅಧಿಕಾರದ ಅಡಿಯಲ್ಲಿ ಇರಿಸಲಾಗಿತ್ತು (27:62, 65, 66). ಈ ಕಾರಣದಿಂದಾಗಿ ಅವರು ಅವರಿಗೆ ವರದಿ ಮಾಡಿದರು. ಇದರೊಟ್ಟಿಗೆ ಅವರು ತಮ್ಮ ಸ್ವಂತ ಅಧಿಕಾರಿಗೆ ಯೇಸುವಿನ ದೇಹವನ್ನು ಸಮಾಧಿಯಿಂದ ಹೊರಗೆ ಹೋಗದಂತೆ ತಡೆಯಲು ಅವರಿಂದ ಆಗಲಿಲ್ಲ ಎಂಬುದನ್ನು ವರದಿಮಾಡಲು ಅವರು ಭಯಪಟ್ಟಿರಬಹುದು. ದೇಹವನ್ನು ಕದ್ದುಕೊಂಡು ಹೋಗದಿದ್ದರೂ, ನಡೆದಿರುವ ಸತ್ಯವನ್ನು ರೋಮಾ ಅಧಿಕಾರಿಗಳಿಗೆ ತಿಳಿಸುವದು ಕಠಿಣವಾಗಿತ್ತು.[14]

ಸೈನಿಕರು ನಡೆದದ್ದೆಲ್ಲವನ್ನು ಮಹಾಯಾಜಕರಿಗೆ ಪ್ರಕಟಿಸಿದರು. "ಎಲ್ಲವನ್ನು" ಅನ್ನುವಾಗ ಮತ್ತಾಯನು ಯಾವ ಅರ್ಥದಲ್ಲಿ ಹೇಳುತ್ತಾನೆ? ಅವರು ಭೂಕಂಪನವನ್ನು ಅನುಭವಿಸಿದ್ದರು, ದೇವದೂತರನ್ನು ನೋಡಿದ್ದರು ಮತ್ತು ಖಾಲಿಯಿರುವ ಸಮಾಧಿಯನ್ನು ವೀಕ್ಷಿಸಿದ್ದರು (28:4). ಬಹುಶಃ ಅವರು ಸ್ತ್ರೀಯರಿಗೆ ದೇವದೂತರು ನೀಡಿದ, "ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ

ಎದ್ದಿದ್ದಾನೆ" ಎಂಬ ಪ್ರಕಟನೆಯನ್ನು ಆಲಿಸಿರಬಹುದು (28:6).

**ವಚನಗಳು 12, 13.** ಸೈನಿಕರ ವರದಿಯಿಂದಾಗಿ ಎಚ್ಚೆತ್ತ ಮಹಾಯಾಜಕರು ಹಿರಿಯರೊಂದಿಗೆ ಕೂಡಿಬಂದು ಒಟ್ಟಾಗಿ ಸಮಾಲೋಚನೆ ಮಾಡಿದರು. ಸಂಗತಿ ಅವರಲ್ಲಿ ಭಯವನ್ನು ಹುಟ್ಟಿಸಿತು ಮತ್ತು ಅದರ ವಿರುದ್ಧವಾಗಿ ಎಚ್ಚರಿಕೆಯನ್ನು ತೆಗೆದುಕೊಂಡಿದ್ದರು (27:64-66). ಆದರೂ ಸಂಭವಿಸಿತ್ತು, ದೇಹವು ಹೋಗಿತ್ತು ಸಮಾಧಿಯು ಖಾಲಿಯಾಗಿತ್ತು ಮತ್ತು ವರದಿಯಂತೆ ಯೇಸು ಎದಿದ್ದನು. ಖಾಲಿಯಿರುವ ಸಮಾಧಿಗೆ ಕಾವಲುಗಾರರೇ ಸಾಕ್ಷಿಯಾಗಿದ್ದರು ಮತ್ತು ಅವರ ವರದಿಯನ್ನು ಅಲ್ಲಗಳೆಯುವದು ಸಾಧ್ಯವಿರಲಿಲ್ಲ.[15]

ಯೆಹೂದ್ಯ ನಾಯಕರು ತಮ್ಮ ಅಭಿಪ್ರಾಯವನ್ನು ಪರಿಗಣಿಸಿದ ನಂತರ, ಅವರು ಲಂಚವನ್ನು ಕೊಡಲು ನಿರ್ಧರಿಸಿದರು. ಅವರು ಸಿಪಾಯಿಗಳಿಗೆ ದೊಡ್ಡ ಮೊತ್ತದ ಹಣವನ್ನು ನೀಡಿದರು. "ದೊಡ್ಡ ಮೊತ್ತದ ಹಣ" ಎಂಬುದಕ್ಕೆ ಗ್ರೀಕ್ ವಾಕ್ಯಭಾಗವನ್ನು "ಸಾಕಷ್ಟು ಬೆಳ್ಳಿ" ಅಥವಾ "ಸಾಕಷ್ಟು ಹಣ" ಎಂದು ಸಹ ಅನುವಾದಿಸಬಹುದು. ಇನ್ನೊಂದು ಅರ್ಥದಲ್ಲಿ ಅದು ಈ ಜನರನ್ನು ತೃಪ್ತಿಪಡಿಸಬಹುದಾದ "ನಿಜವಾದ ಲಂಚವಾಗಿತ್ತು" ಇದಕ್ಕೆ ಬದಲಾಗಿ ಸೈನಿಕರು **ಅವನ ಶಿಷ್ಯರು ರಾತ್ರಿಯಲ್ಲಿ ಬಂದು ನಾವು ನಿದ್ದೆ ಮಾಡುತ್ತಿರುವಾಗ ಅವನನ್ನು ಕದ್ದುಕೊಂಡು ಹೋದರು.** ಎಂಬ ಸುಳ್ಳು ವದಂತಿಯನ್ನು ಹಬ್ಬಿಸಿದರು. ನಾಯಕರು ಈ ಕಥೆ ಖಾಲಿಯಿರುವ ಸಮಾಧಿಗೆ ಹೊಂದಿಕೆಯಾಗುತ್ತದೆ ಇದನ್ನು ಯಾರೂ ಅಲ್ಲಗಳೆಯಲಾರರು ಎಂದು ಭಾವಿಸಿದರು.

ಆ ಸಮಯದಲ್ಲಿ ಶಿಷ್ಯರ ಪ್ರವೃತ್ತಿ ಈ ಸುಳ್ಳು ವದಂತಿ ನಿಜವಾಗಿಯೂ ಎಷ್ಟು ಹಾಸ್ಯಸ್ಪದಯಾಗಿತ್ತು ಎಂಬುದನ್ನು ಪ್ರದರ್ಶಿಸುತ್ತದೆ ಆತನನ್ನು ಬಂಧಿಸಿದ ನಂತರ ಶಿಷ್ಯರೆಲ್ಲರೂ ಚದುರಿಹೋಗಿದ್ದರು (26:56). ಆತನ ವಿಚಾರಣೆಯನ್ನು ದೂರದಿಂದ ವೀಕ್ಷಿಸುತ್ತಿರುವ ಸಮಯದಲ್ಲಿ, ಪೇತ್ರನು ಆತನನ್ನು ಮೂರು ಸಾರಿ ಅಲ್ಲಗಳೆದನು (26:69-75). ಕ್ರೂಜೆಯ ಮರಣವು ಶಿಷ್ಯರನ್ನು ನಿರಾಸೆಯಲ್ಲಿಯೂ ಮತ್ತು ಗೊಂದಲದಲ್ಲಿಯೂ ಹಾಕಿತು (ಲೂಕ 24:21). ಅವರು ಯೇಸುವಿನ ಪುನರುತ್ಥಾನದ ವಿಷಯವನ್ನು ಕೇಳಿದ ನಂತರವೂ, ಅವರು ಭಯಪಟ್ಟು, ಬೀಗ ಹಾಕಿದ ಕೋಣೆಯಲ್ಲಿ ಸೇರಿಬಂದರು (ಯೋಹಾನ 20:19, 26). ಈ ಮನುಷ್ಯರು ಯೇಸುವಿನ ದೇಹವನ್ನು ಪಡಿದುಕೊಳ್ಳುವದಕ್ಕೆ ಯಾವ ಪರಿಸ್ಥಿತಿಯಲ್ಲೂ ಅರ್ಹರಿರಲಿಲ್ಲ. ಆತನ ದೇಹವನ್ನು ಕದ್ದುಕೊಂಡು ಆತನು ಎದ್ದಿದ್ದಾನೆ ಎಂದು ಸಮರ್ಥಿಸಿಕೊಳ್ಳುವದಕ್ಕೆ ಯಾವ ಮುಂದಿನ ಯೋಜನೆ ಅವರಲ್ಲಿರಲಿಲ್ಲ ಅವರ ಮನಸ್ಸಿನಲ್ಲಿ ಇನ್ನೂ ಲೌಕಿಕ ರಾಜ್ಯವೇ ಇತ್ತು (26:51; ಅಪೊಸ್ತಲರ ಕೃತ್ಯಗಳು 1:6).

**ವಚನ 14.** ನಿದ್ದೇಹೋಗಿದ್ದರಿಂದ ಸಮಾಧಿಯನ್ನು ಕಾಯುವದಕ್ಕೆ ವಿಫಲರಾದ ಈ ಕಾವಲುಗಾರರು ತಮ್ಮ ಜೀವವನ್ನು ಅಪಾಯದಲ್ಲಿ ಸಿಲುಕಿಸಿದ್ದರು. ಮಹಾಯಾಜಕರು ಸೈನಿಕರ ಮರುಭರವಸೆಯನ್ನು ನೀಡಿದರು, ಅವರ ಸುಳ್ಳು ವರದಿಯು ದೇಶಾಧಿಪತಿಯ ಕಿವಿಯನ್ನು ತಲುಪಿದರೆ ಅವರನ್ನು ಪಿಲಾತನು ನೀಡುವ ಯಾವುದೇ ಶಿಕ್ಷೆಯಿಂದ ತಪ್ಪಿಸುವದಾಗಿ ಭರವಸೆಯನ್ನು ನೀಡಿದರು.

**ವಚನ 15.** ಕಾವಲುಗಾರರು **ಈ ಹಣವನ್ನು ತೆಗೆದುಕೊಂಡು ತಮಗೆ ಹೇಳಿಕೊಟ್ಟ ಹಾಗೆ ಮಾಡಿದರು. ಈ ಕಾರಣದಿಂದಾಗಿ ಆ ಮಾತು ಇಂದಿನವರೆಗೂ ಯೆಹೂದ್ಯರಲ್ಲಿ ಹಬ್ಬಿದೆ.** ಇಂಥಹ ಕಥೆಯನ್ನು ಹೇಗೆ ನಂಬಿದರು ಎಂಬುದನ್ನು ತಿಳಿದುಕೊಳ್ಳುವದು ಕಠಿಣವಾಗಿದೆ. ಒಂದು ವೇಳೆ ಕಾವಲುಗಾರರು ನಿಜವಾಗಿ ನಿದ್ದೆಮಾಡಿದ್ದರೆ ಅವರಿಗೆ ಕರ್ತನ ದೇಹಕ್ಕೆ ಏನಾಯಿತು ಎಂಬುದನ್ನು ಅವರು ಹೇಗೆ ತಿಳಿದುಕೊಳ್ಳುತ್ತಿದ್ದರು?

ಈ ದಿನದವರೆಗೆ ಎಂಬ ಹೆಚ್ಚಿನ ವಾಕ್ಯಭಾಗವು (ನೋಡಿರಿ 11:23) ಸುಳ್ಳು ಇಂದಿನವರೆಗೂ ಪ್ರಸಾರವಾಗುತ್ತಿದೆ ಎಂದು ಸೂಚಿಸುತ್ತದೆ. ಬಹುಶಃ ಪುನರುತ್ಥಾನದ ನಂತರ ಮೂವತ್ತು ವರ್ಷಗಳು ಕಳೆದ ಮೇಲೆ ಮತ್ತಾಯನು ಈ ಸುವಾರ್ತೆಯನ್ನು ಬರೆದಿರಬಹುದು.

Justin Martyr, ರವರ ಪ್ರಕಾರ, ಎರಡನೆ ಶತಮಾನದಲ್ಲಿಯೂ ಮೋಸವು ಇನ್ನೂ ಪ್ರಾಮೂಖ್ಯವಾಗಿದೆ. ಯೆಹೂದ್ಯರು "ಆತನನ್ನು ಕ್ರೂಜೆಯಿಂದ ಇಳಿಸಿದ ಮೇಲೆ ಮಲಗಿಸಿದ ಸ್ಥಳದಿಂದ ರಾತ್ರಿಯ ವೇಳೆಯಲ್ಲಿ ಶಿಷ್ಯರು ಆತನನ್ನು ಕದ್ದುಕೊಂಡು ಹೋದರು, ಆತನು ಸತ್ತವರೊಳಗಿಂದ ಎದ್ದು ಬಂದು ಪರಲೋಕಕ್ಕೆ ಏರಿ ಹೋಗಿದ್ದಾನೆ" ಎಂದು ಹೇಳುವಾಗ ಅವರು (ಮೋಸಮಾಡುತ್ತಿದ್ದಾರೆ) ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ."[16]

## ಪಾಠಗಳು

## ಪುನರುತ್ಥಾನದ ತರುವಾಯ ಕಾಣಿಸಿಕೊಂಡದ್ದು (ಅಧ್ಯಾಯ 28)

ಯೇಸು ಸತ್ತವರೊಳಗಿಂದ ಎದ್ದು ಬಂದನು ಎಂಬುದಕ್ಕೆ ನಮಗೆ ಯಾವ ಸಾಕ್ಷಿಯಿದೆ? ಒಟ್ಟಾರೆ, ನಾವು ಪುನರುತ್ಥಾನದ ನಂತರ ಯೇಸು ಹನ್ನೆರಡು ಸಾರಿ ಕಾಣಿಸಿಕೊಂಡಿರುವದನ್ನು ನೋಡುತ್ತೇವೆ (ಪೌಲನಿಗೆ ಕಾಣಿಸಿಕೊಂಡಿರುವದನ್ನು ಒಳಗೊಂಡು). ಪುನರುತ್ಥಾನವು ಐತಿಹಾಸಿಕ ಖಚಿತತೆಯಾಗಿದೆ. ಲೂಕನು "ಅವನು ಬಾದೆಪಟ್ಟು ಸತ್ತಮೇಲೆ ತನ್ನನ್ನು ಜೀವಂತನೆಂದು ಅನೇಕ ಪ್ರಮಾಣಗಳಿಂದ ಅಪೊಸ್ತಲರಿಗೆ ತೋರಿಸಿಕೊಂಡನು" ಎಂದು ಬರೆಯುತ್ತಾನೆ (ಅಪೊಸ್ತಲರ ಕೃತ್ಯಗಳು 1:3).

ಯೇಸು ಮಗ್ದಲದ ಮರಿಯಳಿಗೆ ಕಾಣಿಸಿಕೊಂಡನು (ಮಾರ್ಕ 16:9; ಯೋಹಾನ 20:14-17), ಮತ್ತು ಹಲವು ಸ್ತ್ರೀಯರಿಗೆ ಅವರು ಸಮಾಧಿಯಿಂದ ತೆರಳುತ್ತಿರುವ ಸಮಯದಲ್ಲಿ (28:9, 10). ಲೂಕ ಮತ್ತು ಪೌಲನಿಂದ, ಆತನು ಪೇತ್ರನಿಗೆ ಆತನು ಒಬ್ಬನೇ ಇದ್ದಾಗ ಬೇಟಿಯಾದನು ಎಂಬುದನ್ನು ಕಾಣಿಸಿಕೊಂಡನು ಎಂದು ಲೂಕ ಮತ್ತು ಪೌಲನಿಂದ, ಕಲಿತುಕೊಳ್ಳುತ್ತೇವೆ (ಲೂಕ 24:34; 1 ಕೊರಿಂಥ 15:5). ಆತನು ಎಮ್ಮಾಹು ಮಾರ್ಗದಲ್ಲಿ ಇಬ್ಬರು ಶಿಷ್ಯರಿಗೆ ಸಹ ಕಾಣಿಸಿಕೊಂಡನು ಒಬ್ಬನನ್ನು ಕ್ಲೆಯೋಪ ಎಂದು ಗುರುತಿಸಲಾಗಿದೆ (ಲೂಕ 24:13-35). ಆತನು ಅಪೊಸ್ತಲರು ಒಟ್ಟಾಗಿ ಇರುವಾಗ ಕಾಣಿಸಿಕೊಂಡನು - ಮೊದಲು ತೋಮನು ಗೈರುಹಾಜರಿದ್ದನು (ಯೋಹಾನ 20:19, 24). ಮತ್ತೆ ಮುಂದಿನ ವಾರದಲ್ಲಿ ತೋಮನನ್ನು ಒಳಗೊಂಡು ಅವರೆಲ್ಲರು ಇರುವಾಗ (ಯೋಹಾನ 20:26). ನಂತರ ಆತನು ಏಳು ಜನ ಶಿಷ್ಯರಿಗೆ ಗಲಿಲಾಯದ ಸಮುದ್ರದ ಬಳಿಯಲ್ಲಿ ಕಾಣಿಸಿಕೊಂಡನು (ಯೋಹಾನ 21:1-23). ಮತ್ತಾಯನ ಪ್ರಕಾರ, ಗಲಿಲಾಯದಲ್ಲಿ ಹೆಸರಿಲ್ಲದ ಬೆಟ್ಟದಲ್ಲಿ ಕಾಣಿಸಿಕೊಂಡನು, ತಾನು ವಾಗ್ದಾನ ಮಾಡಿದಂತೆ ಅಲ್ಲಿ ಅವರಿಗೆ ಮಹತ್ತರ ನಿಯೋಗವನ್ನು ನೀಡಿದನು (28:18-20). ಐದನೂರು ಜನರಿಗಿಂತ ಹೆಚ್ಚು ಶಿಷ್ಯರಿಗೆ ಮತ್ತು ತನ್ನ ಸಹೋದರ ನಾದ ಯಾಕೋಬನಿಗೆ ಆತನು ಕಾಣಿಸಿಕೊಂಡನು ಎಂದು ಪೌಲನು ಬರೆಯುತ್ತಾನೆ (1 ಕೊರಿಂಥ 15:6, 7). ನಂತರ ಆತನು ಪರಲೋಕಕ್ಕೆ ಏರಿಹೋಗುವ ಪೂರ್ವದಲ್ಲಿ ಹನ್ನೊಂದು (ಲೂಕ 24:50, 51; ಅಪೊಸ್ತಲರ ಕೃತ್ಯಗಳು 1:3-12) ಕಾಣಿಸಿಕೊಂಡನು. "ಕಟ್ಟ ಕಡೆಗೆ ದಿನ ತುಂಬದೆ ಹುಟ್ಟಿದವನಂತಿರುವ ನನಗೂ ಕಾಣಿಸಿಕೊಂಡನು" ಎಂದು ಪೌಲನು ಬರೆಯುತ್ತಾನೆ (1 ಕೊರಿಂಥ 15:8).

ಯೇಸು ಸತ್ತವರೊಳಗಿಂದ ಎದ್ದು ಬರದೇ ಹೋಗಿದ್ದರೆ, ಸಂಭವಿಸುತ್ತಿದ್ದ ನಕಾರಾತ್ಮಕ ಪರಿಣಾಮಗಳ ಕುರಿತು ಮಾತನಾಡಿದ ನಂತರ ಪೌಲನು ಹೀಗೆ ಬರೆಯುತ್ತಾನೆ, "ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು" (1 ಕೊರಿಂಥ 15:20). ಯೇಸು ಲಾಜರನ ಸಹೋದರಿ ಮಾರ್ಥಳಿಗೆ "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವವನು ಎಂದಿಗೂ ಸಾಯುವದಿಲ್ಲ" ಎಂದು ಹೇಳಿದನು (ಯೋಹಾನ 11:25, 26). ಯಾಕೆಂದರೆ ಆತನು ಎದ್ದಿದ್ದಾನೆ. ಆತನು ಎದ್ದು ಬಂದ ಕಾರಣದಿಂದಾಗಿ ನಾವು ಸಹ

ಪೌಲನೊಂದಿಗೆ ಹೀಗೆ ಹೇಳಬಹುದು, "ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ" (1 ಕೊರಿಂಥ 15:57).

## "ಆತನು ಎದ್ದು ಬಂದಿದ್ದಾನೆ" (28:1-17)

ಸಮಾಧಿಯ ಕಲ್ಲಿನ ಮೇಲೆ ಯಾವುದೇ ಪದಗಳನ್ನು ಕೆತ್ತಿದ್ದರು ಅದು ಹೀಗೆ ಪ್ರಕಟಿಸುತ್ತದೆ. "ಜೀವಿಸಿರುವ ಒಬ್ಬಾತನು ಇಲ್ಲಿ ಮಲಗಿದ್ದಾನೆ ಆದರೆ ಈಗ ಆತನು ಸತ್ತಿದ್ದಾನೆ." ಇದಕ್ಕೆ ವಿರುದ್ಧವಾಗಿ ಯೇಸುವಿನ ಸಮಾಧಿ, ಖಾಲಿಯಾಗಿದೆ; ಅದು ವಿಭಿನ್ನವಾದ ಸಂದೇಶವನ್ನು ಪ್ರಕಟಿಸುತ್ತದೆ. ಯೇಸು ಮರಣ ಹೊಂದಿದ ದಿವಸವು ಇತಿಹಾಸದಲ್ಲಿ ಅತ್ಯಂತ ಕತ್ತಲೆಯ ದಿನವಾಗಿತ್ತು ಆದರೆ ಮೂರು ದಿನಗಳ ನಂತರ ಅದು ಬದಲಾಯಿತು. ಪೌಲನು ಹೀಗೆ ಬರೆಯುತ್ತಾನೆ, ಯೇಸು ಇನ್ನೂ ಸತ್ತಿದ್ದಲ್ಲಿ, "ಎಲ್ಲಾ ಮನುಷ್ಯರು ನಿರ್ಭಾಗ್ಯರೆ ಸರಿ" (1 ಕೊರಿಂಥ 15:19).

ನಾವು ಪುನರುತ್ಥಾನದಲ್ಲಿ ಯಾವ ನ್ಯಾಯಬದ್ಧವಾದ ಆಧಾರದ ಮೇಲೆ ನಮ್ಮ ನಂಬಿಕೆಯನ್ನು ಇರಿಸಬೇಕು?

ಪುನರುತ್ಥಾನವು ಪ್ರವಾದಿಸಲ್ಪಟ್ಟಿತು (28:6). ಇದನ್ನು ಹಳೆ ಒಡಂಬಡಿಕೆಯಲ್ಲಿಯೂ ಪ್ರವಾದಿಸಲಾಗಿದೆ (ಕೀರ್ತನೆ 16:8-11; ಯೆಶಾಯ 53:10-12; ಹೊಶೆಯ 6:2). ಮತ್ತು ಯೇಸು ತಾನೆ ಇದರ ಕುರಿತಾಗಿ ಅನೇಕಾವರ್ತಿ ಮಾತನಾಡಿದ್ದಾನೆ (16:21; 17:23; 20:19; 27:40, 63; ಯೋಹಾನ 2:19).

ಪುನರುತ್ಥಾನವು ಪ್ರಮಾಣಿಕರಿಸಲಾಗಿದೆ (28:7-10). ಇದು ಪ್ರತ್ಯಕ್ಷದರ್ಶಿಯ ಮೂಲಕ ಪ್ರಮಾಣಿಕರಿಸಲಾಗಿದೆ ಮತ್ತು ಖಾಲಿ ಸಮಾಧಿ ಪ್ರಮಾಣವಾಗಿದೆ. ಇದರೊಟ್ಟಿಗೆ, ಆತನ ಶಿಷ್ಯರ ಪರಿವರ್ತನೆ ಹೊಂದಿದ ಜೀವಿತ ಯೇಸು ಎದಿದ್ದಾನೆ ಎಂಬುದಕ್ಕೆ ಸಾಕ್ಷಿಯನ್ನು ನೀಡುತ್ತವೆ. ಪುನರುತ್ಥಾನ ಹೊಂದಿದ ಕರ್ತನಿಗೆ ನಮ್ಮ ಸಭೆ ಇಂದು ಸಾಕ್ಷಿಯಾಗಿದೆ.

ಪುನರುತ್ಥಾನವನ್ನು ದೈವೋಕ್ತಿ ಶಾಸ್ತ್ರ ನಂಬದವರೊಂದಿಗೆ ಸ್ವೀಕರಿಸಲಾಗಿದೆ (28:11-17). ಪ್ರಮಾಣಗಳಿದ್ದಾಗಲೂ ಜನರು ಸಂದೇಹಪಟ್ಟಿದ್ದರು. ಪುನರುತ್ಥಾನವನ್ನು ವಿವರಿಸಲು ಅನೇಕ ಪ್ರಯತ್ನಗಳನ್ನು ಮಾಡಲಾಗಿದೆ.

ಪುನರುತ್ಥಾನವು ಯಾವ ವ್ಯತ್ಯಾಸವನ್ನು ಮಾಡುತ್ತದೆ? ನಂಬುವವರ ಮತ್ತು ಸ್ವೀಕರಿಸುವವರ ಜೀವಿತದಲ್ಲಿ ಇದು ನಿತ್ಯವಾದ ವ್ಯತ್ಯಾಸವನ್ನು ತರುತ್ತದೆ!

## ಯೇಸು ಜೀವಂತವಾಗಿದ್ದಾನೆ! (28:1-10)

ಅರಿಮತ್ತಾಯದ ಯೋಸೇಫನು ಮತ್ತು ನಿಕೋದೇಮನು ಯೇಸುವಿನ ಯೋಸೇಫನ ಸಮಾಧಿಯಲ್ಲಿ ಹೂಣಿಟ್ಟ ಮೇಲೆ, ಅವರು ಸಬ್ಬತ್ ದಿನವನ್ನು ಆಚರಿಸುವದಕ್ಕಾಗಿ ಮನೆಗೆ ಹೋದರು. ಒಂದು ವೇಳೆ ಅದು ಕತೆಯ ಅಂತ್ಯವಾಗಿದ್ದಲ್ಲಿ, ನಮಗೆ ಇನ್ನೂ ದುಃಖಪಡುವದಕ್ಕೆ ಕಾರಣವಿತ್ತು - ನಾವು ನಿರೀಕ್ಷೆಯಿಲ್ಲದ ಲೋಕದಲ್ಲಿ ಜೀವಿಸುತ್ತಿದ್ದೆವು. ಪೌಲನು ಕೊರಿಂಥದಲ್ಲಿರುವ ಕ್ರೈಸ್ತರಿಗೆ ಬರೆಯುತ್ತಾನೆ, "ಈ ಜೀವಮಾನ ಕಾಲದ ಪೂರ್ತಿಗೆ ನಾವು ಕ್ರಿಸ್ತನಲ್ಲಿ ನಿರೀಕ್ಷೆಯಿಟ್ಟುಕೊಂಡದ್ದೇ ಹೊರತು ಮತ್ತೇನೂ ಇಲ್ಲದಿದ್ದರೆ ಎಲ್ಲಾ ಮನುಷ್ಯರಲ್ಲಿಯೂ ನಿರ್ಭಾಗ್ಯರೇ ಸರಿ" (1 ಕೊರಿಂಥ 15:19). ಯಾಕೆ? ಯೇಸು ಸತ್ತವರೊಳಗಿಂದ ಎದ್ದು ಬರದೇ ಹೋಗಿದ್ದಲ್ಲಿ, ನಮ್ಮ ಉಪದೇಶ ನಮ್ಮ ನಂಬಿಕೆ ಅದು ವ್ಯರ್ಥವಾಗಿದೆ, ಅಪೊಸ್ತಲರು ಮತ್ತು ಇತರರು ನಾವು ಹೇಳುವವರೆಲ್ಲಾ ಸುಳ್ಳುಗಾರರಾಗಿದ್ದಾರೆ, ನಾವು ಇನ್ನೂ ನಮ್ಮ ಪಾಪದಲ್ಲಿ ಜೀವಿಸುತ್ತಿದ್ದೇವೆ, ಕರ್ತನಲ್ಲಿ ನಿದ್ರೆಹೋದವರು ನಾಶವಾದರು ಮತ್ತು ಈ ಲೋಕವು ಇನ್ನೂ ರಕ್ಷಕನಿಲ್ಲದೇ ಇದೆ (1 ಕೊರಿಂಥ 15:14-18). ಇದಕ್ಕೆ ವ್ಯತಿರಿಕ್ತವಾಗಿ

ಪೌಲನು ದೃಢೀಕರಿಸುತ್ತಾನೆ, "ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು" (1 ಕೊರಿಂಥ 15:20). ಆತನು ಎಲ್ಲಾ ಕಡೆ "ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತಮೇಲೆ ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ" (ರೋಮಾಪುರ 1:4).

ಯೇಸು ಮರಣಹೊಂದಿದ ದಿನವು ವಾಸ್ತವವಾಗಿಯೂ ಮತ್ತು ಸಾಂಕೇತಿಕವಾಗಿಯೂ ಮಾನವನ ಇತಿಹಾಸದಲ್ಲಿ ಕತ್ತಲೆಯ ದಿನವಾಗಿತ್ತು. ಆತನಿಗೆ ಅತ್ಯಂತ ನಿಕಟವಾಗಿದ್ದವರೂ ಸಹ ಆತನನ್ನು ತಿರುಗಿ ಜೀವಿತನಾಗಿ ನೋಡುತ್ತೇವೆ ಎಂದು ನಂಬಿರಲಿಲ್ಲ. ಆತನ ಶಿಷ್ಯರು ಯೆರೂಸಲೇಮಿನ ಎಲ್ಲಿಯೋ ಮೇಲಂತಸ್ತಿನ ಕೋಣೆಯಲ್ಲಿ ಅಡಗಿ ಕುಳಿತಿದ್ದರು (ಯೋಹಾನ 20:19). ಆತನು ಇತರರನ್ನು ಸತ್ತವರೊಳಗಿಂದ ಎಬ್ಬಿಸುವದನ್ನು ನೋಡಿದಾಗ್ಯೂ ಆತನು ತಿರುಗಿ ಜೀವದಿಂದೇಳುತ್ತಾನೆ ಎಂದು ಅವರು ನಂಬಿರಲಿಲ್ಲ. ಆದಾಗ್ಯೂ, ವಾರದ ಮೊದಲನೆಯ ದಿವಸದಲ್ಲಿ ಆತನ ದೇಹವು ಸಮಾಧಿಯಲ್ಲಿ ಕಾಣದಾಗಿದೆ ಎಂದು ವರದಿಯು ಹರಡಲು ಪ್ರಾರಂಭವಾದಾಗ ಎಲ್ಲವೂ ಬದಲಾಯಿತು. ಆತನ ಹಿಂಬಾಲಕರಲ್ಲಿ ಒಬ್ಬರ ನಂತರ ಒಬ್ಬರು ಆತನನ್ನು ಜೀವಂತವಾಗಿ ನೋಡಿದ ಅದ್ಭುತವಾದ ಕಥೆಗಳನ್ನು ಹೇಳಲು ಪ್ರಾರಂಭಿಸಿದರು. ಕೆಲವು ಆತನ ಜೊತೆ ನಡೆದಾಡಿದರು ಮತ್ತು ಆತನೊಟ್ಟಿಗೆ ಮಾತನಾಡಿದರು ಮತ್ತು ಆತನೊಂದಿಗೆ ಊಟವನ್ನು ಸಹ ಮಾಡಿದರು. ಬೇಗನೇ ಅದು ಕೇವಲ ಮತಭ್ರಾಂತಿಯಲ್ಲಿರುವ ಆತನ ಕೆಲವು ಹಿಂಬಾಲಕರ ತಮ್ಮ ಆಳವಾದ ವೇದನೆಯಿಂದಾಗಿ ಮಾಡಿದ ಕೆಲಸವಲ್ಲ. ಯೇಸು ನಿಜವಾಗಿ ಜೀವಿತನಾಗಿದ್ದಾನೆ! ಆ ಒಂದು ಸತ್ಯವು ನಾಟಕೀಯವಾಗಿ ಎಲ್ಲವನ್ನು ಬದಲಾಯಿಸಿತು.

## ಯೇಸುವನ್ನು ಹಿಂಬಾಲಿಸಿದ ಸ್ತ್ರೀಯರು (28:1-10)

ಕೆಲವೊಮ್ಮೆ ಯೆಹೂದ್ಯ ಸಮಾಜದಲ್ಲಿ ಸ್ತ್ರೀಯರನ್ನು ಕೆಳಮಟ್ಟದಲ್ಲಿ ನೋಡಿದ್ದಾಗ್ಯೂ.[17] ಯೇಸು ಅವರನ್ನು ಶ್ರೇಷ್ಟವಾದ ಗೌರವದಿಂದ ನೋಡಿದನು. ಆತನು ಅವರನ್ನು ದೇವರು ಮೂಲತಃ ಯಾವ ಉದ್ದೇಶದಿಂದ ಸೃಷ್ಟಿಸಿದ್ದನೋ ಅದೇ ಉದ್ದೇಶದಿಂದ ನೋಡಿದನು. ಆತನ ಸೇವೆಯಲ್ಲಿ ಅವರು ಕೆಳಗಿನ ಮಾರ್ಗದಲ್ಲಿ ಭಾಗವಹಿಸಿದ್ದನ್ನು ಗಮನಿಸಿರಿ:

1. ಅವರು ಸಹ ರಕ್ಷಣೆಹೊಂದುವದಕ್ಕೆ ಸಮಾನವಾದ ಯೋಗ್ಯತೆಯನ್ನು ಹೊಂದಿದ್ದರು (ಯೋಹಾನ 4:1-42).
2. ಅವರು ಆತನ ಶಿಷ್ಯರೆಂದು ಕರೆಯಲ್ಪಟ್ಟರು (12:48-50).
3. ಅವರು ಸೂಚನೆಗಳನ್ನು ಹೊಂದಿಕೊಂಡರು (ಲೂಕ 10:38-42).
4. ಅವರು ಯೇಸುವಿನ ಸೇವೆಯಲ್ಲಿ ಕೊಡುಗೆಯನ್ನು ನೀಡಿದರು (ಲೂಕ 8:1-3).
5. ಅವರು ಯೇಸುವಿನೊಂದಿಗೆ ಸಂಚರಿಸಿದರು (27:55, 56).
6. ಆತನ ಜೀವಿತದ ಕಾರ್ಗತ್ತಲಿನ ವೇಳೆಯಲ್ಲಿ ಆತನಿಗೆ ನಂಬಿಗಸ್ತರಾಗಿದ್ದರು (27:55, 56).
7. ಪುನರುತ್ಥಾನದ ಮೊದಲನೆಯ ಸಾಕ್ಷಿಗಳಾಗಿದ್ದರು (28:7, 10; ಮಾರ್ಕ 16:9, 10; ಲೂಕ 24:1-10; ಯೋಹಾನ 20:18).[18] David Stewart

## ಮಗ್ದಲದ ಮರಿಯಳು (28:1)

ಮಗ್ದಲದ ಮರಿಯಳು ನಿಸ್ಸಂಶಯವಾಗಿ ಇತಿಹಾಸದಲ್ಲಿ ಅತ್ಯಂತ ತಪ್ಪಾಗಿ ಅರ್ಥೈಸಲ್ಪಟ್ಟ ಸ್ತ್ರೀಯಾಗಿದ್ದಾಳೆ. ಅವಳನ್ನು ವ್ಯಭಿಚಾರಿಣಿ ಎಂದು ಕರೆಯಲಾಗಿದೆ. ಆದರೆ ಹೊಸ ಒಡಂಬಡಿಕೆಯಲ್ಲಿ ಇದನ್ನು ಪ್ರಮಾಣಿಕರಿಸಲು ಯಾವ ಸಾಕ್ಷಿಗಳಿಲ್ಲ. ಆಧುನಿಕ ಪಠ್ಯವು

ಯೇಸುವನ್ನು ದುರ್ಮಾಗಕ್ಕೆ ಎಳೆಯಲು ಅಥವಾ ಆತನ ಹೆಂಡತಿಯಾಗಲು ಪ್ರಯತ್ನಿಸಿದ ಸ್ತ್ರೀ ಎಂದು ಚಿತ್ರಿಸಲಾಗಿದೆ. ಅನೇಕರು ವ್ಯಭೀಚಾರಮಾಡುವಾಗ ಸಿಕ್ಕಿಬಿದ್ದ ಸ್ತ್ರೀಯನ್ನು ಈಕೆ ಎಂದು ತಪ್ಪಾಗಿ ಗುರುತಿಸುತ್ತಾರೆ (ಯೋಹಾನ 8:1-11) ಅಥವಾ ಯೇಸುವಿನ ಪಾದಗಳ ಮೇಲೆ ಕಣ್ಣೀರು ಸುರಿಸಿ ನಂತರ ತನ್ನ ಕೂದಲಿನಿಂದ ಒರೆಸಿ, ಆತನ ಪಾದಗಳಿಗೆ ಮುತ್ತಿಟ್ಟು ನಂತರ ಆತನಿಗೆ ಸುಗಂಧದ್ರವ್ಯದಿಂದ ಅಭಿಷೇಕಿಸಿದ ಪಾಪಿಯಾದ ಸ್ತ್ರೀ ಎಂದು ಗುರುತಿಸುತ್ತಾರೆ (ಲೂಕ 7:37, 38). ಅವಳು ಈ ಸ್ತ್ರೀಯರಲ್ಲಿ ಯಾರು ಆಗಿಲ್ಲ ಹಾಗಿದ್ದಲ್ಲಿ ಅವಳು ಯಾರು?

ಮರಿಯಳು ಮಗ್ದಲದವಳು, ಇದು ಗಲಿಲಾಯ ಸಮುದ್ರದ ನೈರುತ್ಯ ಭಾಗದಲ್ಲಿದೆ (ನೋಡಿರಿ ವ್ಯಾಖ್ಯಾನ 15:39). ಅವಳು ಯೇಸುವನ್ನು ಪ್ರೀತಿಸಿದಳು ಆದರೆ ಅವರ ಸಂಬಂಧದಲ್ಲಿ ಲೈಂಗಿಕತೆ ಇರಲಿಲ್ಲ. ಅವಳಿಗೆ ಆತನನ್ನು ಪ್ರೀತಿಸಲು ಉತ್ತಮವಾದ ಕಾರಣಗಳಿದ್ದವು ಯಾಕೆಂದರೆ ಆತನು ಅವಳಲ್ಲಿದ್ದ ಏಳು ದೆವ್ವಗಳನ್ನು ಬಿಡಿಸಿದ್ದನು (ಮಾರ್ಕ 16:9; ಲೂಕ 8:2). ಅವಳು ಶ್ರದ್ಧೆಯುಳ್ಳ ಯೇಸುವಿನ ಹಿಂಬಾಲಕಳಾಗಿದ್ದಳು ಅದಾದ ನಂತರ ಅವಳು ಆತನ ಸೇವೆಗೆ ಹಣಕಾಸಿನ ಸಹಾಯವನ್ನು ಮಾಡುತ್ತಿದ್ದಳು (ಲೂಕ 8:2, 3). ಯೇಸು ಮರಣಹೊಂದಿದಾಗ ಕ್ರೂಜೆಯ ಬಳಿಯಲ್ಲಿ ಕೊನೆಯವರೆಗೆ ನಿಂತಿದ್ದ ಸ್ತ್ರೀ ಮರಿಯ ಳಾಗಿದ್ದಳು (27:56; ಮಾರ್ಕ 15:40; ಯೋಹಾನ 19:25). ಮತ್ತು ಪುನರುತ್ಥಾನ ಹೊಂದಿದ ದಿವಸ ಬೆಳಿಗ್ಗೆ ಸಮಾಧಿಯ ಬಳಿಯಲ್ಲಿದ್ದ ಮೊದಲನೆಯ ವ್ಯಕ್ತಿ ಇವಳಾಗಿದ್ದಳು (ಮಾರ್ಕ 16:1). ಮಾರ್ಕ 16:9ರ ಪ್ರಕಾರ, ಯೇಸು ಮೊದಲನೆಯ ಬಾರಿಗೆ ಕಾಣಿಸಿಕೊಂಡ ವ್ಯಕ್ತಿ ಇವಳಾಗಿದ್ದಳು.

---

ಟಿಪ್ಪಣಿಗಳು

[1]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick W. Danker (Chicago: University of Chicago Press, 2000), 746. [2]Ibid., 386. [3]Ibid., 909–10. [4]ಈ ವಾಕ್ಯವು ಅಪೊಸ್ತಲರ ಕೃತ್ಯಗಳು 20:7ರಲ್ಲಿಯ ಸಹ ಕಾಣಿಸುತ್ತದೆ. ಶಿಷ್ಯರು ಅಲ್ಲಿ ರೊಟ್ಟಿ ಮುರಿಯುವದಕ್ಕೆ ಸೇರಿ ಬಂದಿದ್ದರು. ಆ ವಚನದಲ್ಲಿ, ವಾಕ್ಯವು "ಶನಿವಾರ ರಾತ್ರಿ" ಎಂದು NEB ಅನುವಾದಿಸಲಾಗಿದೆ. [5]"ವಾರದ ಮೊದಲನೆಯ ದಿವಸ ... ಮುಂಜಾನೆ ಇನ್ನೂ ಕತ್ತಲೆ ಇರುವಾಗಲೇ" ಯೋಹಾನನು ಮಗ್ದಲದ ಮರಿಯಳ ಕುರಿತು ವರ್ಣಿಸಿದ್ದಾನೆ (ಯೋಹಾನ 20:1). ಆತನು ತಿಳಿಸಿರುವ ವಾಸ್ತವವೆನೆಂದರೆ ಮಗ್ದಲದ ಮರಿಯಳು ಒಬ್ಬಂಟಿಗಳಾಗಿದ್ದಳು ಮತ್ತು ಆಕಾಶದ ಇನ್ನೂ ಕತ್ತಲು ಕವಿದಿತ್ತು ಈ ಪ್ರಯಾಣವು ಏಕಾರ್ಥದಲ್ಲಿ ಬರುವ ಪ್ರಯಾಣಕ್ಕಿಂತ ಮೊದಲೆ. ಮಾಡಿದ ಪ್ರಯಾಣವಾಗಿತ್ತು ಎಂದು ಕೆಲವು ಪಂಡಿತರು ಹೇಳು ತ್ತಾರೆ. ಆದರೂ, ಸುವಾರ್ತಾ ವಿಶೇಷತೆಯನ್ನು ಒಟ್ಟಿಗೆ ತೆಗೆದುಕೊಳ್ಳುವಾಗ, ಆಕೆಯು ಇತರ ಸ್ತ್ರೀಯರೊಂದಿಗೆ ಬೇಗನೆ ಬರುವದನ್ನು ಚಿತ್ರಿಸಲಾಗಿದೆ. ಆಕೆಯು ಇತರ ಸ್ತ್ರೀಯರೊಂದಿಗೆ ಬಂದರೂ ಯೋಹಾನನು ಮಗ್ದಲದ ಮರಿಯಳ ಮೇಲೆ ಕೇಂದ್ರಿಕರಿಸಿದ್ದಾನೆ. ಅದು ಅಲ್ಲದೆ, ಸೂರ್ಯನು ಹುಟ್ಟಲು ಪ್ರಾರಂಭಮಾಡಿದಾಗ ಇನ್ನೂ ಕತ್ತಲ್ಲಿತ್ತು. ಅಕಾರ್ಡಕೊಡುವ ಬರೆಯುವ ಬರಹಗಾರರಂತೆ ಯೋಹಾನನು ಅದೇ ರೀತಿಯ ದೃಶ್ಯದಿಂದ ವರ್ಣಿಸಿದ್ದಾನೆ, ಆದರೆ ಬೇರೆ ದೃಷ್ಟಿಯಿಂದ ಅದನ್ನು ವರ್ಣಿಸುತ್ತಿದ್ದಾನೆ. [6]Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew, Mark, Luke*, ed. Clinton E. Arnold (Grand Rapids, Mich.: Zondervan, 2002), 185. ಭೂಪಟವನ್ನು ನೋಡಿರಿ D. R. Bowes, "Earthquake," in *The Zondervan Pictorial Encyclopedia of the Bible,* ed. Merrill C. Tenney (Grand Rapids, Mich.: Zondervan Publishing House, 1975), 2:179. [7]Jack P. Lewis, *The Gospel According to Matthew,* Part 2, The Living Word Commentary (Austin, Tex.: Sweet Publishing Co., 1976), 169. [8]Ibid. [9]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 588. [10]ಆತನ ಪುನರುತ್ಥಾನ ಹೊಂದಿದ ದೇಹದಲ್ಲಿ, ಗೋಡೆಗಳ ಮುಖಾಂತರ ಹಾದು ಹೋಗುವ

ಸಾಮರ್ಥ್ಯ ಯೇಸು ಹೊಂದಿದ್ದನು (ಯೋಹಾನ 20:19, 26).

[11]ದೇವದೂತನು ಭಯಂಕರವಾಗಿರುವ ಕಾವಲುಗಾರರಿಗೆ ಯಾವುದೇ ಆದರಣೆಯ ಶಬ್ದದೊಂದಿಗೆ ಅವರಿಗೆ ಮಾತನಾಡಲಿಲ್ಲ ಎನ್ನುವದು ಗಮನಿಸಿರಿ. [12]Wilkins, 185. [13]Douglas R. A. Hare, *Matthew,* Interpretation (Louisville: John Knox Press, 1993), 331. ನೋಡಿರಿ Josephus *Antiquities* 4.8.15; Mishnah *Rosh Hashanah* 1.8. [14]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 740. [15]Lewis, 171. [16]Justin Martyr *Dialogue with Trypho* 108. [17]ನೋಡಿರಿ ಯೋಸೇಫನು ಅಗಸ್ತಿಸ್ ಅಪೀಸ್ 2.25 ಅವರ ಹೀನವಾದ ಸ್ಥಿತಿಯು ವಾಡಿಕೆಯಂತೆ ಸೆರೆಹಿಡಿಯಲಾಗಿದೆ. "ಸ್ತ್ರೀಯರು, ಸೇವಕರು, ಮತ್ತು ಕಿರಿಯರು" (Mishnah *Sukkah* 2.8; *Berakoth* 3.3). [18]Adapted from Wilkins, 181.